# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ॥ ನಿಜ ಶ್ರಾವಣ ಮಾಸ — ಸಂಪುಟ - ೧೯

ಆಗಸ್ಟ್ - ೨೦೦೪ — ಸಂಚಿಕೆ - ೦೮


# What is 'renunciation'?

## No benefits, not even indirect ones

Shri Bhagavan uvacha : Kamyanaam karma-naam nyasam sannyasam kavayo viduh/Sava-karmaphalam tyagam prahustyagam vichakshanaah. The Blessed Lord said : Sages call 'Sanyasa', the renunciation of all actions done with desire. The wise declare that 'tyaga' is the renunciation of the fruit of activities'. Both sannyasa and tyaga in common parlance, indicate renunciation, the leaving or giving up of worldly objects and pursuits. But the Gita makes a deeper case for true renunciation as requiring an inner non-attachment above and beyond any merely physical act of material abandonment. A subtle distinction is made between sannyasa and tyaga, to define two aspects of renunciation. Sannyasa renunciation signifies the abandonment of the desires and selfish motives that are the usual instigators of actions. Tyaga-renunciation means the relinquishment of, or non-identification with, the inevitable fruits that accrue from all actions.

In no wise does the Gita advocate the renunciation of action itselft, for action is a necessity for the incarnate being and a positive support for the aspiring yogi. The actionless





state is rather the culmination of renunciation, the inner abandonment of identification, with the ego and its instruments of action, in the sole realisation that God is the Sole Doer, Perceiver and Knower. In this state, even though obligatory and dutiful actions continue, they are known as nishkama karma, inactive activity, because they cause no karmic bondage, being free from selfish motivation and from taking to oneself the resulting fruit. This is the ultimate or perfect renunciation towards which the yogi strives - first, by learning to work without personal desire for attaining the fruit of action (sannyasa); and second, by spiritually transcending identification with the resulting fruits (tyaga). The Gita qualifies that a true sannyasi and true yogi is one who PERFORMS dutiful good actions to help mankind and mediative actions to find God.

He is a sannyasi because he renounces the desire for the fruit of his actions; and he is a yogi because he helps others and himself spiritually towards God-realisation. The renunciation signified by sannyasa is thus a total mental relinquishment of the fruit of good actions during their performance. If, however, a sannyasi feeds the poor, mentally concentrating on the benefits of his actions, or if he meditates for the selfish longings of his ego for divine favours or powers, he compromises the purity of his renunciation. The Gita says that the (true) tyagi, like the sannyasi, is a yogi, working and meditating only to please God.

*Extracted from 'God Talks with Arjuna'*

# ಅಧ್ಯಕ್ಷ ನುಡಿ



ಈಗ ಎಲ್ಲೆಲ್ಲೂ ವರ್ಷಧಾರೆ; ನಮ್ಮ ನಾಡಿನ ಮಟ್ಟಿಗಂತೂ ಅವಶ್ಯಕವಾಗಿದ್ದ ಈ ಮಳೆ ಹರ್ಷವನ್ನು ತಂದಿರುವಂತೆಯೇ ನಮ್ಮ ಸಹೃದಯ ಉದಾರ ಮನಸ್ಸಿನ ದಾನಿಗಳಿಂದ ನಮ್ಮಲ್ಲಿ ಹರ್ಷಧಾರೆಯಾಗಿದೆ. 'ವಾರ್ತಾ' ಆದಷ್ಟೂ ಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಲೆಂಬ ನಮ್ಮ ಬಯಕೆಗೆ ಶ್ರೀ ಆರ್.ಜಿ.ಎನ್. ಸ್ವಾಮಿಯವರು ಮತ್ತು ಶ್ರೀ ಆರ್.ವಿ. ವಸಂತ್‌ಕುಮಾರ್ ಅವರು ಉತ್ಸಾಹದ ನೀರೆರೆದಿದ್ದಾರೆ. ಶ್ರೀ ಸ್ವಾಮಿಯವರು ಮಹಾಪೋಷಕರಾಗಲು ಕೊಡುಗೆ ನೀಡಿದ್ದಲ್ಲದೆ, 2007 ವರ್ಷದವರೆಗೆ 'ವಾರ್ತಾ'ಗೆ ಜಾಹೀರಾತು ನೀಡಿದ್ದಾರೆ. ಅಂತೆಯೇ ಶ್ರೀ ಆರ್. ವಿ. ವಸಂತ್ ಕುಮಾರ್ ಅವರು 2008 ರವರೆಗೆ 'ವಾರ್ತಾ'ಗೆ ಜಾಹೀರಾತು ನೀಡಿದ್ದಾರೆ. ಶ್ರೀಮಂತರೂ ಹಾಗೂ ಹೃದಯ ಶ್ರೀಮಂತಿಕೆಯುಳ್ಳವರೂ ಆಗಿರುವ ಈ ಉದಾರ ದಾನಿಗಳಿಗೆ ಸಂಘದ ಅನೇಕಾನೇಕ ಕೃತಜ್ಞತೆಗಳು. ಇದೇ ಸಂದರ್ಭದಲ್ಲಿ ಹತ್ತಾರು ವರ್ಷಗಳಿಂದ ಸಂಘದ ಹಿತಚಿಂತಕರೆನಿಸಿ, 'ವಾರ್ತಾ' ಮೇಲಿನ ಅಭಿಮಾನದಿಂದ ಎಡಬಿಡದೆ ಜಾಹೀರಾತು ನೀಡುತ್ತಾ ಬರುತ್ತಿರುವ ಶ್ರೀಮತಿ ವಿಮಲಾ ದೀಕ್ಷಿತ್ ಅವರ ಕೊಡುಗೆಯನ್ನು ಸ್ಮರಿಸಲು ಇಚ್ಛಿಸುತ್ತೇನೆ.

ಹಾಗೆಯೇ ಅನಿವಾರ್ಯ ಕಾರಣಗಳಿಂದ ಕೆಲವು ಜಾಹೀರಾತುಗಳು ನಮ್ಮ 'ವಾರ್ತಾ'ದ ಕೆಲವು ಸಂಚಿಕೆಗಳಲ್ಲಿ ಬಿಟ್ಟುಹೋಗಿವೆ. ಇದಕ್ಕಾಗಿ ನಮ್ಮನ್ನು ಕ್ಷಮಿಸಬೇಕೆಂದು ಕೋರುತ್ತೇನೆ. ಮುಂದೆ ಹೀಗಾಗದಂತೆ ಎಚ್ಚರವಹಿಸುತ್ತೇವೆಂಬ ಮಾತು ಕೊಡಲು ಬಯಸುತ್ತೇನೆ.

ಕಳೆದು ತಿಂಗಳ 29ರಂದು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಂದ 'ಜ್ಯೋತಿ ಚಾರಿಟಬಲ್ ಟ್ರಸ್ಟ್'ನ ನೂತನ ಕೊಡುಗೆ 'ಜ್ಯೋತಿ ವಿದ್ಯಾರ್ಥಿನಿಯರ ವಸತಿ ಗೃಹ'ದ ಉದ್ಘಾಟನೆಯಾಗಿದೆ. 50 ವಿದ್ಯಾರ್ಥಿನಿಯರಿಗಾಗಿ ಅವಕಾಶವಿರುವ ಈ ಸುಸಜ್ಜಿತ ವಿದ್ಯಾರ್ಥಿ ನಿಲಯದ ಪ್ರಯೋಜನ ನಮ್ಮ ಬಾಂಧವರಿಗೂ ಆಗಲೆಂಬುದೇ ಆಶಯ.

**- ಎಂ ನರಸಿಂಹನ್**





# ಕಾರ್ಯದರ್ಶಿ ಕಾಲಂ



ನಾವೆಲ್ಲಸೇರಿ ಆಚರಿಸುವ ಧಾರ್ಮಿಕವೂ, ಸಂಭ್ರಮ ಸಡಗರದ ದಿನವೂ ಆದ 'ಉಪಾಕರ್ಮ' ಮುಖ್ಯವಾಗಿ ಸಂಘದ ಆಶ್ರಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ನಡೆಯಲಿದೆ. ಇತರ ಅರ್ಥಗಳಲ್ಲದೆ, ಪ್ರಾರಂಭ ಮಾಡುವುದು, ಎಂಬ ಅರ್ಥವನ್ನೂ ಹೊಂದಿರುವ ಈ ಉಪಾಕರ್ಮವು ಪುರುಷರಿಗೆ ಸಂಬಂಧಿಸಿದ ಕ್ರಿಯೆಯಾದರೂ ಮನೆಯವರೆಲ್ಲರೂ ಪರೋಕ್ಷವಾಗಿ ಭಾಗವಹಿಸುತ್ತಾರೆ. ನಮ್ಮ ಸಂಕಲ್ಪಗಳನ್ನು ನೆನೆದು ಅವುಗಳ ಸಾರ್ಥಕ ಅನುಷ್ಠಾನಕ್ಕೂ ಯತ್ನಿಸುವ ಪ್ರಕ್ರಿಯೆ ಈ ದಿನದಿಂದ ಪ್ರಾರಂಭವಾಗಬಹುದು. ಈ ವಿಶಿಷ್ಟ ಆಚರಣೆಯಲ್ಲಿ ಮನೆಯವರೆಲ್ಲರೂ ಸಂತಸದಿಂದ ಪಾಲ್ಗೊಳ್ಳಲು ಅನುಕೂಲವಾಗುವಂತೆ ಬೆಂಗಳೂರಿನಲ್ಲಿ ನಡೆಯುವ 'ಉಪಾಕರ್ಮ'ಕ್ಕಾಗಿ ಮನೆಯವರೆಲ್ಲರನ್ನೂ ಆಹ್ವಾನಿಸಲಾಗಿದೆ. ಒಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇನೆ.

ಉಪಾಕರ್ಮದ ಶುಭಾಶಯಗಳೊಂದಿಗೆ,

**- ಆರ್. ಎಸ್. ಭಾಸ್ಕರ ಅವಧಾನಿ**

# ಶುಭ ಸಮಾಚಾರಗಳು

## ಹುಟ್ಟುಹಬ್ಬ

| ತಾರೀಖು | ಹೆಸರು |
|---|---|
| 27.06.04 | **ಚಿ|| ವಿಘ್ನೇಶ್** |
| ಬೆಂಗಳೂರು | (ಶ್ರೀಮತಿ ಉಮಾ ಮತ್ತು ಶ್ರೀ ರಮೇಶ್ ಎಸ್. ರಾವ್ ಅವರ ಪುತ್ರ ಹಾಗೂ ದಿ|| ಆರ್. ಸತ್ಯನಾರಾಯಣರಾವ್ ಮತ್ತು ಶ್ರೀಮತಿ ಮಂಜುಳಾ ಎಸ್. ರಾವ್ ಅವರ ಮೊಮ್ಮಗ) |

## ಉಪನಯನ ಮಹೋತ್ಸವ

| ತಾರೀಖು | ವಟುವಿನ ಹೆಸರು |
|---|---|
| 04.07.04 | **ಚಿ|| ಶ್ರೀಕೇಶ್** |
| ಬೆಂಗಳೂರು | (ಕೆನಡಾದ ಶ್ರೀ ಆರ್. ಎಸ್. ದಿವಾಕರ್ ಮತ್ತು ಶ್ರೀಮತಿ ರಾಧಿಕಾ ಅವರ ಸುಪುತ್ರ ಹಾಗೂ ಶ್ರೀಮತಿ ಸತ್ಯವತಿ ಮತ್ತು ಶ್ರೀ ಹರವೆ ಕೇಶವಮೂರ್ತಿ ಅವರ ಮೊಮ್ಮಗ) |
| 08.07.04 | **ಚಿ|| ಎಸ್. ಆರ್. ಮಂಜುನಾಥ ಪ್ರಸಾದ್** |
| ಬೆಂಗಳೂರು | (ಶ್ರೀಮತಿ ಮತ್ತು ಶ್ರೀ ಎಸ್.ಜಿ. ರಮೇಶ್‌ರವರ ಪುತ್ರ ಹಾಗೂ ಹಾಸನದ ಶ್ರೀಮತಿ ಜಯಮ್ಮ ಮತ್ತು ಶ್ರೀಗಂಗಾಧರಯ್ಯನವರ ಮೊಮ್ಮಗ) |

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 15.07.04 | **ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಆರ್. ಎಸ್. ರಾಮನಾಥನ್** |
| ಬೆಂಗಳೂರು | (ರುದ್ರಪಟ್ಟಣದ ದಿ|| ಆರ್. ವೈ. ಸುಬ್ರಹ್ಮಣ್ಯ ದೀಕ್ಷಿತ್ ಮತ್ತು ದಿ|| ಪಾರ್ವತಮ್ಮ ಅವರ ಸುಪುತ್ರ) |





## ಜುಲೈ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು :

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ಆರ್. ವಿಶ್ವನಾಥ | ಬೆಂಗಳೂರು | 6990 | 101.00 (ಗೃಹಪ್ರವೇಶ) |
| ಎಂ. ಅನಂತನಾರಾಯಣ | ಬೆಂಗಳೂರು | 6486 | 51.00 (ಗೃಹಪ್ರವೇಶ) |
| ಆರ್.ಎಸ್.ರಾಮನಾಥನ್ | ಬೆಂಗಳೂರು | 6489 | 200.00 (ಗೃಹಪ್ರವೇಶ) |
| ಎಸ್. ಜಿ. ರಮೇಶ್ | ಬೆಂಗಳೂರು | 6491 | 100.00 (ಮಗನ ಉಪನಯನ) |
| ಬಿ.ಎಸ್.ಸತೀಶ್, ವಾಣಿ | ಬೆಂಗಳೂರು | 6493 | 101.00 (ಮಗನ ಉಪನಯನ) |
| ಆರ್.ಅನಂತಮೂರ್ತಿ | ಮೈಸೂರು | 6903 | 501.00 |
| | (ಷಷ್ಟ್ಯಬ್ದಿಪೂರ್ತಿ ಸಹೋದರ ಆರ್. ಗೋವಿಂದರಾಜು) | | |
| ಬಿ. ವಿ. ಶ್ರೀಕಂಠ | ಭದ್ರಾವತಿ | 6499 | 50.00 (ಮಗನ ಮದುವೆ) |
| ಆರ್. ಎ. ದಿವಾಕರ್ | ಕೆನಡಾ | 7106 | 102.00 (ಮಗನ ಉಪನಯನ) |

## ವಾರ್ತಾ / ಜಾಹೀರಾತು ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಜ್ಯೋತಿ ಇಂಡಸ್ಟ್ರೀಸ್ | ಬೆಂಗಳೂರು | 6494 | 600.00 |
| ವಿಮಲಾ ದೀಕ್ಷಿತ್ | ಬೆಂಗಳೂರು | 6496 | 600.00 |
| ವಿಕ್ರಾಡೈನ್ ಇಂಜಿನಿಯರ್ಸ್ | ಮುಂಬಯಿ | 6497 | 600.00 |
| ಕುಮಾರ್ ಎಲೆಕ್ಟ್ರಿಕಲ್ಸ್ | ಬೆಂಗಳೂರು | 6498 | 3,000.00 |
| ಎಸ್.ಎನ್. ಶ್ರೀನಿವಾಸಮೂರ್ತಿ | ಬೆಂಗಳೂರು | 6485 | 50.00 |

## ವಾರ್ತಾ ಪೋಷಕರು / ಮಹಾ ಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್.ಎಸ್.ಭಾಸ್ಕರ ಅವಧಾನಿ | ಬೆಂಗಳೂರು | 6495 | 1,000.00 |

## ಹಾಸ್ಟೆಲ್ ಅನ್ನದಾನಕ್ಕೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಮೋಹನ್ ಸುಂದರ್ | ಯು.ಎಸ್.ಎ. | 6896 | 4,000.00 |
| ಮೋಹನ್ ಸುಂದರ್ | ಯು.ಎಸ್.ಎ. | 6897 | 4,00.00 |
| ಹೆಚ್.ಬಿ.ಶಾಂತಾರಾಂ | ಬೆಂಗಳೂರು | 6898 | 4,000.00 |
| ಆರ್. ಮುರಳೀಧರ್ ಆರ್. ಶ್ರೀಧರ್ ಆರ್. ರವಿಕುಮಾರ್ ಆರ್. ಚಂದ್ರಶೇಖರ್ ವೈದೇಹಿ ಕೆ. ಸ್ವಾಮಿ ನಳಿನಿ ಅಚ್ಯುತ | ಬೆಂಗಳೂರು | 6490 | 4,000.00 |
| ಬೆಂಗಳೂರು ಸಂಕೇತಿ ಮಹಿಳಾ ಸಮಾಜ | ಬೆಂಗಳೂರು | 6492 | 400.00 |

## ಜುಲೈ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.07.04 ಬೆಂಗಳೂರು | ವಿಶ್ವನಾಥ್ ಹೆಚ್. ಎಸ್. | ತಂದೆ ಶ್ರೀಕಂಠಯ್ಯ |
| 01.07.04 ಬಾಂಬೆ | ರಾಧಾ ಆತ್ರೇಯ 4 ದಿನಗಳು | |
| 01.07.04 ಬೆಂಗಳೂರು | ವಿಂಗ್ ಕಮಾಂಡರ್ ಬಿ.ವಿ.ಆರ್. ರಾವ್ | ತಂದೆ ವಾಸುದೇವರಾವ್ |
| 01.07.04 ಬೆಂಗಳೂರು | ಮೆ. ಜ್ಯೋತಿ ಛಾರಿಟಬಲ್ ಟ್ರಸ್ಟ್ 6 ದಿನಗಳು | ಜ್ಯೋತಿ |
| 03.07.04 ಬಾಂಬೆ | ಕೃಷ್ಣಮೂರ್ತಿ ಆರ್.ವಿ. | ತಂದೆ ವೆಂಕಟರಾಮಯ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 06.07.04 ಮೈಸೂರು | ಕೃಷ್ಣಪ್ಪ ಎಸ್.ಆರ್. | ಸಹೋದರಿ ಸಾವಿತ್ರಿ |
| 08.07.04 ಯು.ಎಸ್.ಎ. | ರಾಮಚಂದ್ರ ಮತ್ತು ವೈದೇಹಿ ಶಿವಶಂಕರ್ | ಪುತ್ರ ರಾಮ್ ಶಿವಶಂಕರ್ |
| 11.07.04 ಪುಣೆ | ಸರೋಜಮ್ಮ ಕೃಷ್ಣಮೂರ್ತಿ | ತಾಯಿ ಗುಂಡಮ್ಮ ಹನುಮಂತರಾವ್ |
| 11.07.04 ಯು.ಎಸ್.ಎ. | ಅಶೋಕ್ ರುದ್ರಪಟ್ಟಣ ಮತ್ತು ರೂಪಾ | ತಂದೆ ನರಸಿಂಹಯ್ಯ ಮತ್ತು ತಾಯಿ ಪದ್ಮಾವತಿ |
| 12.07.04 ಯು.ಎಸ್.ಎ. | ಜಗನ್ನಾಥ್ ಎಸ್.ಎನ್. | ಪುತ್ರ ಕುಮಾರ್ |
| 13.07.04 ಬೆಂಗಳೂರು | ಲಕ್ಷ್ಮೀಕಾಂತ ಆರ್. ಕೆ. ಮತ್ತು ನಂದಕುಮಾರ್ ಆರ್. ಕೆ. | ತಂದೆ ಆರ್. ಎಲ್. ಕೇಶವಯ್ಯ |
| 13.07.04 ಬೆಂಗಳೂರು | ಶಾಂತಾರಾಮ್ ಹೆಚ್.ಬಿ. | ತಂದೆ ಶ್ರೀ ಬಿಂದುಮಾಧವ ಶಾಸ್ತ್ರಿ |
| 14.07.04 ಬೆಂಗಳೂರು | ನರಸಿಂಹಮೂರ್ತಿ ಆರ್.ಎನ್. | ಪುಟ್ಟಣ್ಣಯ್ಯ, ಶ್ರೀನಿವಾಸ, ಕೇಶವಮೂರ್ತಿ, ದೊರೆಸ್ವಾಮಿ |
| 15.07.04 ಬೆಂಗಳೂರು | ನರಸಿಂಹಮೂರ್ತಿ ಆರ್.ಎನ್. | ಬೆಟ್ಟದಪುರ ಓಣಿ ವೆಂಕಟ ರಾಮಯ್ಯ,ನಾಗಮ್ಮ |
| 16.07.04 ಬೆಂಗಳೂರು | ನರಸಿಂಹಮೂರ್ತಿ ಆರ್.ಎನ್. | ನಾಲೆ ರಾಮಸ್ವಾಮಯ್ಯ, ಜಯಣ್ಣ, ಚಂದ್ರಶೇಖರ್ |
| 18.07.04 ಬೆಂಗಳೂರು | ನರಸಿಂಹಮೂರ್ತಿ ಆರ್.ಎನ್. | ನಾಗರತ್ನ, ಪಾರ್ವತಮ್ಮ, ಲಕ್ಷಮ್ಮ |
| 18.07.04 ಯು.ಎಸ್.ಎ. | ಮೋಹನ್ ಸುಂದರ್ | ತಂದೆ ಆರ್.ಎನ್ ಸುಂದರ್ ರಾಮ್ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 31.07.04 ಬೆಂಗಳೂರು | ಆಡಿಟರ್ ಶ್ರೀಕಂಠಯ್ಯನವರ ಮಕ್ಕಳು | ತಂದೆ ಎಸ್ ಎ ಶ್ರೀಕಂಠಯ್ಯನವರ **ಹುಟ್ಟುಹಬ್ಬ** |
| 14.07.04 ಬೆಂಗಳೂರು | ಆರ್.ಜಿ.ವೈದ್ಯನಾಥ ಮತ್ತು ಆರ್.ಜಿ.ಕೆ.ಡಿ. ಪ್ರಸಾದ್ | ತಂದೆ ಆರ್.ಎಸ್. ಗುಂಡೂರಾಮಯ್ಯ |
| 16.07.04 ಬೆಂಗಳೂರು | ಸಂಕೇತಿ ಮಹಿಳಾ ಸಮಾಜ | |

## ಆಸ್ತಿಕರಿಗೊಂದು ಅವಕಾಶ

ಬೆಂಗಳೂರಿನ ನಿವಾಸಿಯಾಗಿರುವ ಶ್ರೀಮತಿ ಜಯಲಕ್ಷ್ಮಿ ಸುಂದರರಾವ್ ಅವರು ಜಿಗಣಿ ಹೋಬಳಿಯ ಭೂತನಹಳ್ಳಿಯಲ್ಲಿರುವ ತಮ್ಮ 30'×40' ನಿವೇಶನವನ್ನು ಲಲಿತಾ ತ್ರಿಪುರಸುಂದರಿ ದೇವಸ್ಥಾನದ ನಿರ್ಮಾಣಕ್ಕಾಗಿ ಉಚಿತವಾಗಿ ನೀಡಲು ಇಚ್ಛಿಸಿದ್ದಾರೆ. ಆಸಕ್ತಿಯುಳ್ಳ ಆಸ್ತಿಕರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀಮತಿ ಜಯಲಕ್ಷ್ಮಿ ಸುಂದರರಾವ್**
ನಂ. 72/7, ಅನಿಕೇತನ (ಸಾಯಿಬಾಬ ಮಂದಿರದ ಹಿಂಭಾಗ)
ತ್ಯಾಗರಾಜನಗರ 1ನೇ ಬ್ಲಾಕ್, ರಾಧಾಕೃಷ್ಣ ರಸ್ತೆ,
ಬೆಂಗಳೂರು - 560 028.
ದೂರವಾಣಿ : 26761682

**ನಿವೇಶನದ ವಿವರ :**
174, ಭೂತನಹಳ್ಳಿ (ಇಂದಿರಾನಗರ)
ಜಿಗಣಿ ಹೋಬಳಿ
ಆನೇಕಲ್ ತಾಲ್ಲೂಕು
ಅಳತೆ : 30'× 40'





## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

**ಆರ್. ಎಸ್. ಭಾಸ್ಕರ ಅವಧಾನಿ** **ಪೋಷಕರು**

## ವಧು ಬೇಕಾಗಿದೆ

### ವರನ ವಿವರ

| | | |
|---|---|---|
| ಹೆಸರು | : | ಪ್ರಸನ್ನ ಸುಬ್ರಹ್ಮಣ್ಯ |
| ಗೋತ್ರ | : | ಆತ್ರೇಯಸ |
| ವಯಸ್ಸು | : | 34 ವರ್ಷಗಳು |
| ನಕ್ಷತ್ರ | : | ಅಶ್ವಿನಿ |
| ವಿದ್ಯಾರ್ಹತೆ | : | M.B.A. (Germany) |
| ಉದ್ಯೋಗ | : | ಕಮ್ಯುನಿಕೇಷನ್ ಆಫೀಸರ್ - People's Health Movement in India. |
| ಅಭಿರುಚಿ | : | ಕರ್ನಾಟಕ ಶಾಸ್ತ್ರೀಯ ಸಂಗೀತ, ಮೃದಂಗ ಅಭ್ಯಾಸ. |
| ಸಂಪರ್ಕಿಸಿ | : | 23353459 |

## ವಧು ಬೇಕಾಗಿದೆ

### ವರನ ವಿವರ

| | | |
|---|---|---|
| ಗೋತ್ರ | : | ಕೌಶಿಕ |
| ವಯಸ್ಸು | : | 28 ವರ್ಷಗಳು |
| ನಕ್ಷತ್ರ | : | ಪೂರ್ವಾಭಾದ್ರ |
| ವಿದ್ಯಾರ್ಹತೆ | : | B.E. |
| ಉದ್ಯೋಗ | : | Software Engineer in MNC, Bangalore Project Leader |
| ಅಪೇಕ್ಷೆ | : | Working Engineer /Any other Profession |
| ಸಂಪರ್ಕಿಸಿ | : | 25442554, 08276 - 276269 |





## ಪ್ರತಿಭೆ



**ಕು|| ಶ್ರುತಿ ಕಾಶೀನಾಥ್, ದೆಹಲಿ**
10ನೇ ತರಗತಿ CBSE, ಶೇ. 93.6
**ತಂದೆ :** ಎ. ಎಸ್. ಕಾಶೀನಾಥ್
**ತಾಯಿ :** ಅರುಣಾ ಕಾಶೀನಾಥ್
**ಅಜ್ಜಂದಿರು :** ದಿ|| ಎಸ್.ಎನ್.ಎಸ್. ದೀಕ್ಷಿತ್ ಹಾಗೂ ಶ್ರೀ ಆರ್.ಕೆ.ಎ. ಸುಬ್ರಹ್ಮಣ್ಯ
**ಅಜ್ಜಿಯರು :** ಶ್ರೀಮತಿ ವಿಮಲಾ ದೀಕ್ಷಿತ್ ಹಾಗೂ ಶ್ರೀಮತಿ ಸರಸ್ವತಿ ಸುಬ್ರಹ್ಮಣ್ಯ



**ಕು|| ಅಶ್ವಿನಿ ಆರ್. ಎಸ್., 7ನೇ ತರಗತಿ** ICSE, **ಶೇ 90.38**
**ತಂದೆ :** ಆರ್. ಎನ್. ರವಿಶಂಕರ್
**ತಾಯಿ :** ಮಮತಾ ರವಿಶಂಕರ್
**ಅಜ್ಜಂದಿರು :** ದಿ|| ಆರ್. ನಾರಾಯಣಸ್ವಾಮಿ ಹಾಗೂ ಶ್ರೀ ಎಂ. ಎಸ್. ಸುಬ್ಬರಾವ್
**ಅಜ್ಜಿಯರು :** ದಿ|| ಪಾರ್ವತಮ್ಮ ಹಾಗೂ ಶ್ರೀಮತಿ ಸರಸ್ವತಿ.

## *Change of Address*

**R.S. Ramanarayana**
**Meera**
309, 9th Main, 17th Cross
Milk Colony, Malleswaram
Bangalore - 560 003.
**Ph : 57652325**

## ಸಮಾಚಾರ ಸಂಗ್ರಹ

<u>ರಾಜಾಸ್ತಾನ :</u> ಸರ್ಕಾರಿ ಸ್ಕೂಲ್ ಮೇಷ್ಟ್ರರ ಮಕ್ಕಳಿಗೆ ಪ್ರೈವೇಟ್ ಸ್ಕೂಲ್‌ನಲ್ಲಿ ಪ್ರವೇಶ ನಿಷೇಧ (9 ಜುಲೈ 04; ಪಿಟಿಐ) ಜೈಪುರ : ಇನ್ನು ಮುಂದೆ ಸರ್ಕಾರಿ ಶಾಲೆಯ ಶಿಕ್ಷಕರು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವಂತಿಲ್ಲ ಎಂದು ಶಿಕ್ಷಣ ಮಂತ್ರಿ ಘನಶ್ಯಾಮ ತಿವಾರಿ ಹೇಳಿದರು. ಹಾಗೆ ಮಾಡಿದರೆ ಅವರ 'ಯಾವುದೋ ಕೊಂಪೆಗೆ' ವರ್ಗವಾಗುವ ಶಿಕ್ಷೆಗೆ ಒಳಗಾಗಬೇಕು. ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಷ್ಟು ಚೆನ್ನಾಗಿರುವುದಿಲ್ಲ ಎನ್ನುವುದು ಸರ್ಕಾರಿ ಶಿಕ್ಷಕರಿಗೇ ಗೊತ್ತಿದೆ. ಆದುದರಿಂದ ಅವರೇ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ. ಇಂತಹ ಮನೋಭಾವಕ್ಕೆ ಕಡಿವಾಣ ಹಾಕಿದಾಗ ಸರ್ಕಾರಿ ಶಾಲೆಗಳ ಗುಣಮಟ್ಟ ಸ್ವಲ್ಪ ಹೆಚ್ಚಬಹುದೆಂಬ ಲೆಕ್ಕಾಚಾರ ಸರ್ಕಾರದ್ದು. ಶಿಕ್ಷಕರ ಮಕ್ಕಳ ಶಿಕ್ಷಣದ ವಿವರಗಳನ್ನು ಸರ್ಕಾರ ಸಂಗ್ರಹಿಸುತ್ತಿದೆ. ಇಂತಹ ಸರ್ಕಾರದ ಸರ್ವಾಧಿಕಾರದ ಧೋರಣೆಯನ್ನು ಶಿಕ್ಷಕರು ವಿರೋಧಿಸಿದ್ದಾರೆ. ಮಂತ್ರಿಗಳು - ಅಧಿಕಾರಿಗಳೂ ಸಹ ಇಂತಹ ಕೆಲಸ ಮಾಡುತ್ತಿದ್ದಾರೆ. ಅವರ ಮಕ್ಕಳನ್ನೂ ಸರ್ಕಾರಿ ಶಾಲೆಗಳಿಗೆ ಕಳಿಸುವಂತೆ ಮೊದಲು ಮಾಡಲಿ ಎಂದು ಸವಾಲು ಹಾಕಿದ್ದಾರೆ. ಈ ಕ್ರಮದಿಂದ ಕೇವಲ ನಗರ ಪ್ರದೇಶಗಳ ಸರ್ಕಾರಿ ಶಿಕ್ಷಕರು ತಾಪತ್ರಯಕ್ಕೆ ಬೀಳುತ್ತಾರೆ. ಹಳ್ಳಿಗಳಲ್ಲಿ ಖಾಸಗಿ ಶಾಲೆಗಳು ಅದರಲ್ಲೂ ಉತ್ತಮ ಶಾಲೆಗಳು ಅಪರೂಪ. ಸರ್ಕಾರದ ಈ ಕ್ರಮ ಅರ್ಥವಿಲ್ಲದ್ದು ಎಂದು ಶಿಕ್ಷಕರ ಆಕ್ಷೇಪ.

<u>ದೆಹಲಿಗೆ ಬೆಂಗಳೂರು ಮಾದರಿ (9 ಜುಲೈ 04) :</u> ರಸ್ತೆಗಳಿಗೆ ಟಾರ್ ಹಾಕುವ ಸಂದರ್ಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು ಪ್ಲಾಸ್ಟಿಕ್ಕನ್ನು ಬೆರೆಸಬೇಕೆಂದು ಆದೇಶ ನೀಡಿತ್ತು. 8% ಪ್ಲಾಸ್ಟಿಕ್ಕನ್ನು ಬೆರೆಸಿದರೆ ರಸ್ತೆಗಳು ಬಿರುಕು ಬಿಡುವುದಿಲ್ಲ, ಮಳೆಯ ನೀರಿನಿಂದ ಹಾಳಾಗುವುದಿಲ್ಲ, ಇದರಿಂದ Elasticity ಯನ್ನು ಕಳೆದುಕೊಳ್ಳುವುದೂ ಇಲ್ಲ, ಅಷ್ಟೇ ಅಲ್ಲದೆ ಪ್ಲಾಸ್ಟಿಕ್ ಕಸದ





ವಿಲೇವಾರಿಯೂ ಸುಲಭವಾಗಿ ಆಗಿದೆ, ಅದರಿಂದ ಉಪಯೋಗವೂ ಆಗಿರುವುದು ಸರ್ಕಾರದ ಗಮನಕ್ಕೂ ಬಂದಿದೆ, ಅದಕ್ಕೆ ಪ್ರಚಾರವೂ ಸಿಕ್ಕಿದೆ. ಈಗ ಬೆಂಗಳೂರಿನ ಈ ಮಾದರಿಯನ್ನು ದೆಹಲಿಯ ಸರ್ಕಾರವೂ ಅನುಸರಿಸಲು ಹೊರಟಿದೆ. ಇದರಿಂದ ದೆಹಲಿಯ ಮಿತಿ ಮೀರಿದ ಪ್ಲಾಸ್ಟಿಕ್ ಮಾಲಿನ್ಯದ ತಲೆನೋವು ನೀಗಲಿದೆ.

<u>ಎಲ್ಟಿಟೀಯಿಯಿಂದ ಬಾಲಯೋಧರ ನೇಮಕ (10, ಜುಲೆ 04; ಎಪಿ)</u> ಲಂಕೆಯಲ್ಲಿ ಶಾಂತಿಯ ಮಾತುಕತೆಗೆ ಅಡ್ಡಿಮಾಡಬೇಕೆಂಬ ಉದ್ದೇಶದಿಂದ ಎಲ್ಟಿಟಿಯಿ ಬಾಲಕರನ್ನು ಪಳಗಿಸಲು ಪ್ರಾರಂಭಿಸಿದೆ. ಇದಕ್ಕೆ ಒಪ್ಪಲಾರದ ತಂದೆ-ತಾಯಿಯರನ್ನು ಥಳಿಸಲಾಗುತ್ತಿದೆ ಎಂದು ಅಂತರರಾಷ್ಟ್ರೀಯ ಅಮ್ನೆಸ್ಟಿ ಆರೋಪಿಸಿದೆ. 19 ವರ್ಷಗಳಿಂದ ಇಂದಿನವರೆಗೆ ಬಾಲಯೋಧರ ಸಂಖ್ಯೆ 400 ಆಗಿದೆ ಎಂದು ಹೇಳಿದೆ. ಹೋರಾಟದನಂತರ ಬಾಲಯೋಧರನ್ನು ಸ್ವಾತಂತ್ರ್ಯಗೊಳಿಸಿ ಬೇಕಾದಾಗ ಮತ್ತೆ ಕರೆಸಿಕೊಳ್ಳುತ್ತದೆ ಎಂದೂ ಹೇಳಿದೆ.

<u>ಅಮೇರಿಕ : ಬೇಹುಗಾರಿಕೆ ವೈಫಲ್ಯ (17 ಜುಲೈ 04; ಬಿಬಿಸಿ) ಲಂಡನ್:</u> ಎಲ್ಲಾ ದೇಶಗಳ ರಾಜಕೀಯ ವ್ಯಕ್ತಿಗಳು ಚರ್ಚೆ ಮಾಡುವುದು ಅಮೇರಿಕಾದ ರಾಜಕೀಯವನ್ನು. ಎಲ್ಲರ ಗಮನವೂ (ಯಾವುದೇ ವಿಚಾರವಾಗಿರಲಿ) ಸದಾ ಅಮೇರಿಕಾದ ಮೇಲೆಯೇ! ಅಲ್‌ಖೈದ್ ಸೆಪ್ಟೆಂಬರ್ 11, 2001ರಲ್ಲಿ ವಾಣಿಜ್ಯ ಕೇಂದ್ರದ ಮೇಲೆ ಧಾಳಿಮಾಡಿದ ದಿನದಿಂದಲೇ ಅಮೇರಿಕಾದ ಮೇಲೆ ಅನುಮಾನ ಪ್ರಾರಂಭವಾಯಿತು. 1999ರಲ್ಲಿ ಪ್ರಧಾನಿ ವಾಜಪೇಯಿಯವರು ಜೂನ್ ತಿಂಗಳಿನಲ್ಲಿಯೇ ಬುಷ್‌ಗೆ ಎಚ್ಚರಿಕೆ ಕೊಟ್ಟಿದ್ದರು. ಆದರೆ ಎಚ್ಚರಿಕೆಯನ್ನು ಬುಷ್ ಕಡೆಗಾಣಿಸಿದ್ದರಿಂದ ಭಾರಿ ಅನಾಹುತವೇ ಆಯಿತು. ಇನ್ನೂ ಬಿನ್ ಲ್ಯಾಡೆನ್ನನನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ, ಅಮೇರಿಕಾದ ಬೇಹುಗಾರಿಕೆ ಏಜೆನ್ಸಿಗಳಿಗೆ, ಅವು ಕೇಳಿದ ಹಣವನ್ನು ಕ್ಲಿಂಟನ್ - ಬುಷ್ ಕೊಡಲಿಲ್ಲ.

ಆದುದರಿಂದಲೇ ಅವು ಕೆಲಸ ಮಾಡಲಿಲ್ಲ. ಅಮೇರಿಕಾ ಸರ್ಕಾರದ ಮೇಲೆ ಸೇಡು ತೀರಿಸಿಕೊಳ್ಳಲು - ಸ್ವಲ್ಪ ಮಜಾ ನೋಡಬೇಕೆಂದುಕೊಂಡ - ಈ ವಿಚಾರಗಳನ್ನು ತಿಳಿದಿದ್ದ ನೈಜೀರಿಯಾ ರಾಯಭಾರಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಗುಮಾಸ್ತನೊಬ್ಬ ಬುಷ್-ಬ್ಲೇರ್ ಜೋಡಿಯನ್ನು ಆಟವಾಡಿಸುವ ಉದ್ದೇಶದಿಂದ ರೋಂನಿಂದ ''ನೈಜೀರಿಯಾದಿಂದ ಸದ್ದಾಂ ಹುಸೇನ್ ಯುರೇನಿಯಂ ಖರೀದಿಸುತ್ತಿದ್ದಾರೆ'' ಎಂದು ಪ್ರಕಾರೆಬ್ಬಿಸಿದ. ಅದಕ್ಕೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಫೋರ್ಜರಿ ಸೈನ್ - ಸೀಲುಗಳನ್ನು ಹಾಕಿ, ಆ ದಾಖಲೆಗಳನ್ನು ಇಟಲಿಯ ಸರ್ಕಾರಕ್ಕೆ ಕೊಟ್ಟ. ಬೇಹುಗಾರರನ್ನು ಕೇಳಿದಾಗ ಎಲ್ಲದಕ್ಕೂ ಹೌದೆಂದೇ ಹೇಳಿದರು ! ಕಡೆಗೆ ಅಮೇರಿಕಾ - ಬ್ರಿಟನ್ ಅವನಂದುಕೊಂಡಂತೆ ಹಾಸ್ಯಾಸ್ಪದವಾದವು.

<u>ಮೋಡಿ ಮಾಡಿದ ಮಾವು (22 ಜುಲೈ 04; ಪಿಟಿಐ) ಬೀಜೀಂಗ್ :</u> ಭಾರತದ ಮಾವಿನ ಹಣ್ಣುಗಳು ಚೀನೀಯರಿಗೆ ಇಷ್ಟವಾಗಿದೆ. ಮಾವಿನ ಹಣ್ಣುಗಳು ಇಲ್ಲಿಗೆ ಬಂದ ತಕ್ಷಣವೇ ಖಾಲಿಯಾಗುತ್ತಿವೆ. ಇದರಿಂದ ಪಾಕೀಸ್ತಾನ, ಥೈಲಾಂಡ್, ಫಿಲಿಫೈನ್ಸ್ ಹಣ್ಣುಗಳನ್ನು ಕೇಳುವವರೇ ಇಲ್ಲದಂತಾಗಿದೆ.

<u>ಕಪ್ಪು ಹಳ್ಳಗಳಿಗೆ ಜೀರ್ಣಶಕ್ತಿ ಇಲ್ಲ (22 ಜುಲೈ 04; ಎಪಿ) ಡಬ್ಲಿನ್ :</u> ಭೂಮಿಯ ಉತ್ತರ - ದಕ್ಷಿಣ ಧೃವಗಳಲ್ಲಿ ಇರುವ ಕಪ್ಪು ಹಳ್ಳಗಳು (black holes) ಸದಾಕಾಲವೂ ಸುದ್ದಿ ಮಾಡುತ್ತಿದೆ! ಖ್ಯಾತ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಅವರು ಇವು ತಮ್ಮ ಕಡೆಗೆ ಬಂದ ಎಲ್ಲಾ ಪದಾರ್ಥಗಳನ್ನು ನುಂಗುತ್ತವೆ ಎನ್ನುವುದು ನಿಜ. ಆದರೆ ಅವುಗಳಿಗೆ ಜೀರ್ಣಶಕ್ತಿ ಇಲ್ಲ ಎಂದು ಹೇಳಿದರು. ನುಂಗಿದ ನಂತರ ಹಿಂಡಿ - ಹಿಪ್ಪೆ ಮಾಡಿದನಂತರ ಉಗಿಯುತ್ತವೆ ಎಂದಿದ್ದಾರೆ.

- ಬಿ. ಎಸ್. ಸತೀಶ್





## ಶ್ರದ್ಧಾಂಜಲಿ



ಬಿರ್ಲಾ ಕುಟುಂಬದ ಸಾಮ್ರಾಜ್ಞೆ ''ಬಡೀಮಾ'' ಎಂದೇ ಪ್ರಖ್ಯಾತಿ ಪಡೆದ ಶ್ರೀಮತಿ ಪ್ರಿಯಂವದಾದೇವಿ ಇನ್ನಿಲ್ಲ. ಇವರು ಭಾರತೀಯ ವಿದ್ಯಾಭವನದ ಪೋಷಕರೂ ಮತ್ತು ಬಿರ್ಲಾ ಕುಟುಂಬದ ಅತ್ಯಂತ ಹಿರಿಯ ಸದಸ್ಯರೂ ಆಗಿದ್ದರು. ದಿನಾಂಕ 03.07.2004ರಂದು ಕೊಲ್ಕತ್ತಾದ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು ಎಂದು ತಿಳಿಸಲು ವಿಷಾದಿಸುತ್ತೇನೆ. ಬಿರ್ಲಾ ಕುಟುಂಬದ ಬಡೀಮಾ (ಹಿರಿಯ ತಾಯಿ) ಎಂದೇ ಕರೆಯುತ್ತಿದ್ದರು. ನಮ್ಮನ್ನು ಇದೇ ಹೆಸರಿನಲ್ಲಿ ಪರಿಚಯಿಸಿದ್ದರು. ಕಾಶೀಯಾತ್ರೆ ಮುಗಿಸಿ ಸಾಮೂಹಿಕ ಭೀಮ ಸಂತರ್ಪಣೆಯನ್ನು ಮೈಸೂರಿನ ವಾಸವೀ ವೃದ್ಧಾಶ್ರಮದಲ್ಲಿ ಶ್ರೀ ಮತ್ತೂರವರ ನೇತೃತ್ವದಲ್ಲಿ ನಡೆಸಿದಾಗ, ಬಡೀಮಾ ಬಂದಿದ್ದರು. ಇವರಿಗೆ 83 ವರ್ಷ ವಯಸ್ಸಾಗಿತ್ತು. ಕೆಲವು ವರ್ಷ ಲಂಡನ್ನಿನಲ್ಲೂ ಅನಂತರ ಅವರದೇ ಆದ ತಮ್ಮ ವಿಶ್ರಾಂತಿಧಾಮದ ಪ್ರಯಾಗದ (ಅಲಹಾಬಾದ್) ಆನಂದಕಾನನದಲ್ಲಿ ವಾಸಿಸುತ್ತಿದ್ದರು. ಲಂಡನ್, ಬೆಂಗಳೂರು ಮತ್ತು ಮೈಸೂರು ಭಾರತೀಯ ವಿದ್ಯಾ ಭವನಗಳಿಗೆ ಸಾಕಷ್ಟು ಧನ ಸಹಾಯ ಮಾಡಿದವರು. ಬೆಂಗಳೂರು ಭಾರತೀಯ ವಿದ್ಯಾಭವನಕ್ಕೆ 2 ಕೋಟಿ ಧನ ಸಹಾಯ ಮಾಡಿರುತ್ತಾರೆ. ತಮ್ಮ ಪತಿ ಮಾಧವ ಪ್ರಸಾದ್ ಬಿರ್ಲಾ ಹೆಸರಿನಲ್ಲಿ ಎಂ.ಪಿ. ಬಿರ್ಲಾ ಫೌಂಡೇಶನ್ ಎಂಬ ನಿಧಿ ಸ್ಥಾಪಿಸಿ ಅನೇಕ ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರ ಪಾರ್ಥಿವ ಶರೀರವನ್ನು ಪ್ರಯಾಗದ ಆನಂದಕಾನನಕ್ಕೆ ವಿಮಾನದ ಮೂಲಕ ತಂದು ವೈದಿಕ ಸಂಪ್ರದಾಯದ ಪ್ರಕಾರ, ಬಿರ್ಲಾ ಕುಟುಂಬಸ್ಥರು, ಹಿತೈಷಿಗಳು, ಸಕಲ ರಾಜಗೌರವದೊಡನೆ ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು. ಆ ಆಘಾತದ ಸುದ್ದಿ ತಿಳಿದ ಭಾರತೀಯ ವಿದ್ಯಾಭವನದ ಕಾರ್ಯಕಾರಿ ನಿರ್ದೇಶಕ ಶ್ರೀ ಮತ್ತೂರು ಕೃಷ್ಣಮೂರ್ತಿಯವರು ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲು

ಪ್ರಯಾಗಕ್ಕೆ ತೆರಳಿ, ಅಚ್ಚುಮೆಚ್ಚಿನ ಬಡೀಮಾರವರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ್ದರು. ಭಾರಿ ಕೈಗಾರಿಕಾ ಕುಟುಂಬದ ಒಡತಿ, ಬಡೀಮಾ, ಪ್ರಿಯಂವದಾದೇವಿ ಗಂಗೆಯಲ್ಲಿ ಲೀನವಾದರು. ಇವರಿಗೆ ಸಂಕೇತಿಗಳನ್ನು ಕಂಡರೆ ಅಚ್ಚುಮೆಚ್ಚು. ಹವನ ಹೋಮಾದಿಗಳು ಯಜ್ಞ ಯಾಗಾದಿಗಳನ್ನು ತಮ್ಮ ಆನಂದಕಾನನದಲ್ಲಿ ಶ್ರೀ ಮತ್ತೂರವರ ನೇತೃತ್ವದಲ್ಲಿ ಮತ್ತೂರು, ಹೊಸಹಳ್ಳಿ, ಅಗ್ರಹಾರ ಮುಂತಾದ ಕಡೆಗಳಿಂದ ಋತ್ವಿಜರನ್ನು ಕರೆಸಿ ನಡೆಸುತ್ತಿದ್ದರು. ಇಂಥಾ 'ಶತಮಾನದ ವ್ಯಕ್ತಿ' ಅಪಾರ ಬಂಧು ವರ್ಗದವರನ್ನು, ಹಿತೈಷಿಗಳನ್ನು ಬಿಟ್ಟು ಅಗಲಿದ್ದಾರೆ. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕಾಶೀಯಾತ್ರಾರ್ಥಿಗಳ ಪರ ಕೋರುತ್ತಿದ್ದೇನೆ. ಬಡೀಮಾರವರಿಗೆ ಕಾಶೀಯಾತ್ರಾರ್ಥಿಗಳ ಕೊನೆಯ ನಮನ ಮತ್ತು ಅಶ್ರುತರ್ಪಣ.

**ಆರ್. ಎಸ್. ಕಾಶೀಪತಿ,**
ಕುಶಾಲನಗರ.

---

With best Compliments from

**M/s KUMAR ELECTRICALS**

**Engineers and Class I Licensed Electrical Contractors.**

**R. V. VASANTHKUMAR**

***No. 8(S), 1st Phase, 1st Stage,***
***Chandra Layout, Vijayanagar,***
***Bangalore - 560 040.***
***Ph : 080 - 23215297, 56964119***
***Fax : 080 - 23394884, 23396551 (R)***





## ಬೆಟ್ಟದಪುರ ಸಂಕೇತಿ ಸಂಘ – ಮೈಸೂರು ಶಾಖೆ

# ಸಾಮೂಹಿಕ ಉಪನಯನದ ಕಾರ್ಯಕ್ರಮದ ವರದಿ

ದಿನಾಂಕ 20.05.2004 ಗುರುವಾರ ಸಂಘದ ಸಭಾಂಗಣದಲ್ಲಿ ಸಂಜೆ 6.30 ಗಂಟೆಗೆ ಗಣಪತಿ ಪೂಜೆಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಈ ಸಮಯದಲ್ಲಿ 9 ಜನ ವಟುಗಳ ತಂದೆ ತಾಯಿ, ಸಂಬಂಧಿಕರು ಹಾಜರಿದ್ದರು.

ಈ ಕಾರ್ಯಕ್ರಮದ ನೇತೃತ್ವವನ್ನು ವೇ|| ಬ್ರ|| ಶ್ರೀ ಲಕ್ಷ್ಮೀನಾರಾಯಣ ಅವಧಾನಿ, ಶ್ರೀ ಕೃಷ್ಣಾವಧಾನಿ ಮತ್ತು ಶ್ರೀ ಪ್ರದೀಪ ಅವರು ವಹಿಸಿಕೊಂಡಿದ್ದರು. 8 ಜನ ಋತ್ವಿಜರು ಭಾಗವಹಿಸಿದ್ದರು.

ಉದಕಶಾಂತಿ ಶಾಸ್ತ್ರ ಮತ್ತು ಇತರೆ ಕಾರ್ಯಕ್ರಮ ಮತ್ತು ವೇದ ಮಂತ್ರ ಪಠಣ ಋತ್ವಿಕರಿಂದ 7 ಗಂಟೆಗೆ ಪ್ರಾರಂಭವಾಗಿ 9 ಗಂಟೆಯವರೆಗೆ ನಡೆಯಿತು. ಅನಂತರ ಎಲ್ಲರಿಗೂ ಭೋಜನ ವ್ಯವಸ್ಥೆ ನಡೆಯಿತು.

ದಿನಾಂಕ 21.05.2004 ಶುಕ್ರವಾರ ಬೆಳಿಗ್ಗೆ 6.30 ಗಂಟೆಗೆ ಉಪನಯನದ ಕಾರ್ಯಕ್ರಮ ಪ್ರಾರಂಭವಾಯಿತು. ಗಣಪತಿ ಹೋಮ, ನವಗ್ರಹ ಹೋಮ ಇತ್ಯಾದಿ ನಡೆಯಿತು. 9 ಜನ ವಟುಗಳಿಗೆ ಬ್ರಹ್ಮೋಪದೇಶಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬೆಳಿಗ್ಗೆ ಎಲ್ಲರಿಗೂ ತಿಂಡಿ-ಕಾಫಿ ಕೊಡಲಾಯಿತು. ಕೊನೆಯಲ್ಲಿ ಪೂರ್ಣಾಹುತಿಯೊಂದಿಗೆ ಕಾರ್ಯಕ್ರಮ ಮುಗಿಯಿತು. ಈ ಉಪನಯನ ಮಹೋತ್ಸವಕ್ಕೆ ಪರಸ್ಥಳಗಳಿಂದ ಸಂಕೇತಿ ಬಾಂಧವರು ಬಂದಿದ್ದರು. ಸುಮಾರು 500 ಜನ ಸಂಕೇತಿ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆಂದು ತಿಳಿಸಲು ಸಂತೋಷವಾಗುತ್ತದೆ. ಎಲ್ಲಾ 9 ವಟುಗಳಿಗೆ ಕೇಂದ್ರ ಸಮಿತಿಯಿಂದ ಕೊಟ್ಟ ಫಲಕಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ನಂತರ ಎಲ್ಲರಿಗೂ ಭೋಜನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು.

ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿಸಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿ ಧನ ಸಹಾಯ ಮಾಡಿದ ಎಲ್ಲರಿಗೂ ಕಾರ್ಯಕಾರಿ ಸಮಿತಿಯು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

**ಹೆಚ್. ಎಸ್. ಶ್ರೀಧರಮೂರ್ತಿ**
ಮೈಸೂರು

## POINT TO PONDER

A retired judge has recently joined us for our morning walk. For the first two weeks his company was quite interesting and thought provoking as he used to narrate how he tackled difficult cases in the court and his judgement were impartial etc.. But of late, his whole personality has changed and he has become a person who goes on narrating how his wife dominates him, how his doctor son and doctor daughterinlaw don't care for him, how even his two grand daughters just cast dirty repercussions at him etc. etc.. The same story of woe is narrated every day. We sympathise with his lot and cheer him up that God will reform them and that he should bear with them as they are his own. "Oh, friends you do not know what all sacrifices I have made for them. I have even deprived myself of so many trivival luxuries just for their happiness. I educated my son, got him a doctor wife, built them a nursing home, not to mention how I decorated my wife with jewels and what do I get in return for all the sacrifices. Tell me, friends don't I deserve some solace in my oldage at least ? Oh, God has been really cruel to me !" As though Mother Nature understood his grievance, there was a slight drizzle of rain as though Mother Nature was shedding tears.





An elderly gentleman who was a silent spectator observing us daily, suddenly burst out laughing, "Excuse me, gentlemen, the very purpose of coming for a walk early in the morning is to charge ourselves to face the trials and tribulations of the day ahead and not to brood. It is meant to make us forget our worries and to relax, to breathe in the good air and to rejuvinate our system. What is the use of starting a good day with worries and depression. Please enjoy Nature, see the beauty of the clouds in the sky, see the fresh green leaves, listen to the songs of the birds, feel the freshness of the flowers, inhale the sweet fragrance of the flowers, enjoy the company of your friends, just try to merge with nature and assimilate the cosmic energy, be relaxed and happy. Please dump all your worries, tensions, depression and the problems in the garbage bin before you start on your walk. This is my humble suggestion. Please think it over.!" With a genial smile he took leave us. Well, his remarks though addressed to the judge, made a terrible impression on me.

Let us ponder on this point.

**- Dr. S. Mohan Ram**

***********

# ಬೆಂಗಳೂರು ಶಾಖೆಯಿಂದ

ಆತ್ಮೀಯ ಸಂಕೇತಿ ಬಂಧುಗಳೆ,

ಈಗಿನ ದಿನಗಳಲ್ಲಿ ಬೆಂಗಳೂರು ಶಾಖೆಯು ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲಾ ತಿಳಿದೇ ಇದೆ. ಈ ನಿಟ್ಟಿನಲ್ಲಿ ಈ ವರ್ಷದ **ಉಪಾಕರ್ಮ**ವನ್ನು ವಿಶೇಷವಾಗಿ ನಡೆಸಬೇಕೆಂದು ಸಮಿತಿ ತೀರ್ಮಾನಿಸಿದೆ. ಈ ವರ್ಷ ಉಪಾಕರ್ಮ ಭಾನುವಾರವಾಗಿರುವುದು ಇನ್ನೊಂದು ವಿಶೇಷ. ರಜಾದಿನವಾದುದರಿಂದ ಎಲ್ಲರಿಗೂ ಭಾಗವಹಿಸಲು ಅನುಕೂಲವಿರುತ್ತದೆ.

**ಉಪಾಕರ್ಮ** ಎಂದರೆ ಕೇವಲ ಪುರುಷರಿಗೆ ಮಾತ್ರ ಎಂಬ ಒಂದು ರೂಢಿ ಇದೆ. ಆದರೆ ಈ ವರ್ಷದ ಉಪಾಕರ್ಮವನ್ನು ಒಂದು ಹಬ್ಬದ ರೀತಿಯಲ್ಲಿ ಮನೆಮಂದಿ ಎಲ್ಲಾ ಸೇರಿ ನಡೆಸಿದರೆ ಚೆನ್ನಾಗಿರುತ್ತದೆ ಎಂಬ ಉದ್ದೇಶದಿಂದ ಈ ವರ್ಷ ಎಲ್ಲಾ ಸಂಕೇತಿ ಬಂಧುಗಳನ್ನು, ಹೆಂಗಸರು, ಮಕ್ಕಳು ಎಂಬ ಭೇದವಿಲ್ಲದೆ ಆಹ್ವಾನಿಸುತ್ತಿದ್ದೇವೆ. ಎಲ್ಲರೂ ಉತ್ಸಾಹದಿಂದ ಆತ್ಮೀಯತೆಯಿಂದ ಭಾಗವಹಿಸುತ್ತೀರೆಂದು ಆಶಿಸುತ್ತೇವೆ. ಯಥಾರೀತಿ, ಹಣದ ಅಭಾವದಿಂದ ವೈಯ್ಯಕ್ತಿಕ ಆಹ್ವಾನವನ್ನು ಕಳುಹಿಸಲಾಗುತ್ತಿಲ್ಲ. ಇದನ್ನೇ ವೈಯ್ಯಕ್ತಿಕ ಆಹ್ವಾನವೆಂದು ತಿಳಿದು ಎಲ್ಲರೂ ಭಾಗವಹಿಸುತ್ತೀರೆಂದು ನಂಬಿರುತ್ತೇವೆ.

ಹಿಂದಿನ ವರ್ಷ ಉಪಾಹಾರದ ವ್ಯವಸ್ಥೆಯಾಗಿದ್ದು, ಈ ವರ್ಷ ಹಬ್ಬವಾಗಿ ಆಚರಿಸುತ್ತಿರುವುದರಿಂದ **ಭೋಜನದ ವ್ಯವಸ್ಥೆ** ಇರುತ್ತದೆ. ಈ ಎಲ್ಲಾ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನೆರವೇರಿಸಲು ತಾವೆಲ್ಲರೂ ಮುಂಚಿತವಾಗಿ ತಮ್ಮ ಹೆಸರನ್ನು ಈ ಕೆಳಗೆ ತಿಳಿಸಿರುವ ಸದಸ್ಯರಿಗೆ **ದೂರವಾಣಿ ಮೂಲಕ ತಿಳಿಸುತ್ತೀರೆಂದು ಆಶಿಸುತ್ತೇವೆ.**

**ಎಸ್. ಸಿ. ಮಂಜುನಾಥ**
ಅಧ್ಯಕ್ಷರು
(26612979)

ದಯವಿಟ್ಟು ಸಂಪರ್ಕಿಸಿ

| | | |
|---|---|---|
| ಬಿ. ಆರ್. ನರಸಿಂಹ ಮೂರ್ತಿ | - | 26711031 |
| ಆರ್. ಎಸ್. ಶ್ರೀನಿವಾಸಯ್ಯ | - | 25220781 |
| ಆರ್. ಕೆ. ಮಂಜುನಾಥ್ | - | 23578073 |
| ಹೆಚ್. ಎನ್. ಮುರಳೀಧರ್ | - | 26662029 |
| ಆರ್. ಕೆ. ಗೀತಾಮಣಿ | - | 26695657 |
| ಬಿ. ಕೆ. ಸತ್ಯನಾರಾಯಣ | - | 26768450 |





## ಯಜುರುಪಾಕರ್ಮ - ಬೆಂಗಳೂರು ಶಾಖೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಉಪಾಕರ್ಮವು ದಿನಾಂಕ 29.08.2004 ಭಾನುವಾರದಂದು ಶಾಖೆಯ ಆಶ್ರಯದಲ್ಲಿ ಜರುಗಲಿದೆ. ಸದಸ್ಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

**ಸ್ಥಳ : ವಿದ್ಯಾವಿಹಾರ**
(ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದ ಆವರಣ)
ಶಂಕರಪುರಂ, ಬೆಂಗಳೂರು - 560 004.

**ಸಮಯ : ಪ್ರಾತಃ 9.00 ಘಂಟೆಗೆ**

ಕಾರ್ಯಕಾರಿ ಸಮಿತಿ

## ಯಜುರುಪಾಕರ್ಮ - ಮೈಸೂರು ಶಾಖೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಉಪಾಕರ್ಮವು ದಿನಾಂಕ 29.08.2004 ಭಾನುವಾರದಂದು ಶಾಖೆಯ ಆಶ್ರಯದಲ್ಲಿ ಜರುಗಲಿದೆ. ಸದಸ್ಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

**ಸ್ಥಳ : ಸಂಕೇತಿ ಸಂಘದ ಸಭಾಂಗಣ**

**ಸಮಯ : ಪ್ರಾತಃ 9.00 ಘಂಟೆಗೆ**

**ಹೆಚ್. ಎಸ್. ಶ್ರೀಧರ ಮೂರ್ತಿ** — ಅಧ್ಯಕ್ಷರು
**ಬಿ. ಎಸ್. ನಾರಾಯಣಸ್ವಾಮಿ** — ಕಾರ್ಯದರ್ಶಿ

**ಬದಲಾದ ದೂರವಾಣಿ ಸಂಖ್ಯೆ**

| | |
|---|---|
| ಬಿ. ಎನ್. ನರಸಿಂಹ ಮೂರ್ತಿ | **9448600621** |
| ಬಿ. ಎನ್. ಕಿರಣ್ | **9448323170** |

# ಬೆಂಗಳೂರು ಸಂಕೇತಿ ಮಹಿಳಾ ಸಮಾಜ

ದಿನಾಂಕ 10.07.2004ರಂದು ಆದರ್ಶ ವನಿತಾ ಸಮಾಜದಲ್ಲಿ ಸರ್ವ ಸದಸ್ಯರ ಸಭೆಯು ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಯಿತು. ಕಾರ್ಯಕ್ರಮವು ರೋಹಿಣಿ, ವತ್ಸಲಾ ಮತ್ತು ಗೀತಾಮಣಿ ಇವರುಗಳು ಹಾಡಿದ ಗಣೇಶ ಸ್ತುತಿಯಿಂದ ಪ್ರಾರಂಭವಾಯಿತು. ಶ್ರೀಮತಿ ಸುಕನ್ಯಾಮೂರ್ತಿಯವರು ಎಲ್ಲರನ್ನೂ ಆದರದಿಂದ ಸ್ವಾಗತಿಸಿದರು. ವರ್ಷದ ಕಾರ್ಯಕ್ರಮಗಳ ವರದಿಯನ್ನು ಕಾರ್ಯದರ್ಶಿ ಆರ್. ಕೆ. ಗೀತಾಮಣಿಯವರು ಓದಿದರು. ಖಜಾಂಚಿ ಶ್ರೀಮತಿ ವಸುಂಧರಾ ಅವರು ವರ್ಷದಲ್ಲಿ ಸಂಘ ಮಾಡಿರುವ ಖರ್ಚು-ಆದಾಯಗಳ ಬಗ್ಗೆ ವಿವರ ನೀಡಿದರು. ಆರ್ಥಿಕವಾಗಿ ಸಂಘವು ಸದೃಢ-ಸಬಲ ಆಗುತ್ತಿರುವ ಬಗ್ಗೆ ಎಲ್ಲಾ ಸದಸ್ಯೆಯರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ನಂತರ ದಿ|| ಉಮಾರಾಮಕೃಷ್ಣ ನೆನಪಿನಲ್ಲಿ ಸದಸ್ಯೆಯರಿಗೆ ಭಾವಗೀತೆ ಸ್ಪರ್ಧೆ ನಡೆಸಲಾಯಿತು. ಮತ್ತು ಒಂದು ಆಟವನ್ನು ಆಡಿಸಲಾಯಿತು. ಯಾವುದೇ ಪಬ್ಲಿಕ್ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸದಸ್ಯೆಯರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಪ್ರತಿಭೆಗಳನ್ನು ಗುರುತಿಸಿ, ಪುರಸ್ಕರಿಸಲಾಯಿತು. ಅಷ್ಟೇ ಅಲ್ಲ ಎಸ್.ಎಸ್.ಎಲ್.ಸಿ. ಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಶ್ರೀಮತಿ ಮನೋರಮಾ ಅವರು ಅವರ ಅಣ್ಣ ವಿಶ್ವೇಶ್ವರ ಅವರ ಹೆಸರಿನಲ್ಲಿ ದತ್ತಿ ಇಟ್ಟಿರುವ ಬಹುಮಾನವನ್ನು ನೀಡಿದರು.

ಕಳೆದ ತಿಂಗಳು ಮತ್ತು ಇಂದು ಆಡಿಸಿದ ಎಲ್ಲಾ ಆಟಗಳ ಬಹುಮಾನಗಳನ್ನು ಮತ್ತು ಭಾವಗೀತೆ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ನೀಡಲಾಯಿತು. ಬಹುಮಾನಗಳನ್ನು ಅಧ್ಯಕ್ಷೆ ಶ್ರೀಮತಿ ಲಲಿತಮ್ಮ ಕೆ., ಉಪಾಧ್ಯಕ್ಷೆ ಶ್ರೀಮತಿ ಲೀಲ ಎಸ್. ಮತ್ತು ಹಿರಿಯ ಸದಸ್ಯೆ ಶ್ರೀಮತಿ ಸತ್ಯವತಿ ಆರ್. ಅವರು ನೀಡಿ ವಿಜೇತರನ್ನು ಅಭಿನಂದಿಸಿದರು.

ಅಧ್ಯಕ್ಷೆ ಲಲಿತಮ್ಮನವರು ಕಿರಿಯರ ಕಾರ್ಯಶ್ರದ್ಧೆಯನ್ನು ಮೆಚ್ಚುತ್ತಾ, ಸಂಘದ ಒಳಿತಿಗಾಗಿ ಮಾಡುವ ಯಾವುದೇ ಕೆಲಸಕ್ಕೂ ತಮ್ಮ ಒಪ್ಪಿಗೆ ಇದ್ದೇ ಇರುತ್ತದೆ ಎಂದು ನುಡಿದರು. ಶ್ರೀಮತಿ ಮಾಲತಿಯವರು ವಂದನಾರ್ಪಣೆ ಮಾಡಿದರು.

ಸಂಘವು ಪ್ರತಿವರ್ಷದಂತೆ ಈ ವರ್ಷವೂ ಸದಸ್ಯೆಯರಿಗೆ ಆತಿಥ್ಯ ನೀಡಿತು. ವಿಶೇಷವಾದ ಚೆನ್ನಾ ಬತೂರ, ಜೀರಿಗೆ ಅನ್ನ, ಮಾವಿನ ಸೀಕರಣೆ, ಸಕ್ಕರೆ ಒಬ್ಬಟ್ಟು ಇವುಗಳಿಂದ ಕೂಡಿದ ರುಚಿಯಾದ ಭೋಜನವನ್ನು ಸ್ವೀಕರಿಸಿ, ''ಸಭೆಯು ಚೆನ್ನಾಗಿತ್ತು,





ಊಟವೂ ಬಹಳ ಚೆನ್ನಾಗಿತ್ತು'' ಎಂದು ಪ್ರಶಂಸಿಸುತ್ತಾ ಎಲ್ಲರೂ ಸಂತಸದಿಂದ ಮನೆಗೆ ತೆರಳಿದರು.

### ಬಹುಮಾನ ವಿಜೇತರುಗಳು

| | ಜಾಹೀರಾತು ಸ್ಪರ್ಧೆ | ಪದಪುಂಜ | ಭಾವಗೀತೆ |
|---|---|---|---|
| I Prize | ಮಂಜುಳಾ ವಿಶ್ವನಾಥ | ಗೀತಾ ಕೃಪಾ | ರೋಹಿಣಿ ಶೇಖರ್ |
| II Prize | ನಳಿನಿ ನಟರಾಜ | ರತ್ನ ಜಯರಾಂ | ಆರ್. ಕೆ. ಗೀತಾಮಣಿ |
| III Prize | ಶರಾವತಿ. ಎಂ. | ಸುಭಾಷಿಣಿ | ಸುಭಾಷಿಣಿ |

ಎಲ್ಲಾ ಆಟಗಳ ಬಹುಮಾನಗಳನ್ನು ನಮ್ಮ ಸದಸ್ಯೆ ಶ್ರೀಮತಿ ಸ್ಮಿತಾ ಅವರು ಪ್ರಾಯೋಜಿಸಿದ್ದದ್ದು ಹೆಮ್ಮೆಯ ವಿಷಯ. ಸಂಘವು ಇವರ ಸಹಾಯಕ್ಕಾಗಿ ಇವರಿಗೆ ವಂದಿಸಿದೆ.

**ರು. ಕೃ. ಗೀತಾಮಣಿ**
ಗೌ|| ಕಾರ್ಯದರ್ಶಿ
ದೂ : 26695657

## ಪ್ರಶಸ್ತಿ

ಬೆಂಗಳೂರು ವಿಜಯನಗರ ಬಡಾವಣೆಯ ಕನ್ನಡ ಅಭಿವೃದ್ಧಿ ಬಳಗ ತಾ|| 09.07.04ರಂದು ಕುವೆಂಪು ಜನ್ಮ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿದ್ದ ನೂರು ಕವಿಗಳ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ ನಮ್ಮ ಸಂಕೇತಿ ಬಾಂಧವರೂ ಸಾಹಿತಿಗಳೂ ಆದ ಶ್ರೀ ಬೆ. ಗೋ. ರಮೇಶ್ ಅವರು ಭಾಗವಹಿಸಿದ್ದು ಅವರಿಗೆ ಬಳಗವು 'ಕುವೆಂಪು ಕವಿರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀ ರಮೇಶ್, ಶ್ರೀ ಎನ್. ಬಸವಾರಾಧ್ಯ ಅವರಿಂದ ಈ ಪ್ರಶಸ್ತಿ ಸ್ವೀಕರಿಸಿದರು. ಶ್ರೇಷ್ಠ ಕವಿಗಳಿಗೆ ಈ ಪ್ರಶಸ್ತಿ ಆಯೋಜಿಸಲಾಗಿತ್ತು. ಶ್ರೀ ರಮೇಶ್ ಅವರಿಗೆ ಸಂಘದ ಅಭಿನಂದನೆಗಳು.

# IN SEARCH OF HEALTH

...... (Continued)

Till recently (6 months) I held a view that Ayurvedic "Naadi Pariksha" can only identify the imbalance of Vatha Pitha and Kapha, but cannot locate the site of the disease within the body. I have changed this view after I met Dr. Adishesha of Mysore. I understand that, he is the Nephew of the famous B.V. Pundith of Nanjangud, and visits Bangalore for 2 days once in two weeks. My own and other friends' and relatives experiences are given below.

1. Sri. A. Gangadhar, a Reiki master told me that, Dr. Adishesa prevented Dialysis for his nephew by simple way of Banana shoot juice (Bale Dindu) and he Generally prescribes vegetables, spices and his own Ayurvedic preparations. I consulted him for constipation and by simple dania and Jeera powder and Banana shoot juice, I overcame the problem in 45 days.

2. After my first consultation, I took my mother, who has an ischemic heart, gastritis Arthritis, BP, and severe constipation and lack of sleep for the last 25 yrs. She is still continuing the treatment, and so far has reported lessened gas problem, ease in Bowels and 50% reduction in use of painkillers.

3. During consultation a patient intervened and gave 3 large MRI scan films along with the report. Two films were garbled but the third one was OK. Dr.





Adishesha marked a spot on the film and told THAT was the blood clot he had identified by examining the tongue of the patient. Surprisingly the Radiologist had not noticed any abnormality. The patient was advised to continue the treatment and take another scan after recovery. This instance has convinced me that, he is able to locate the problem like an X-Ray. I have seen him telling patients (before they tell their ailment) about their Sugar level, BP, harmonal imbalances etc; by reading the pulse and tongue.

4. My wife who got sudden pain in the left hip descending to the thigh and knee started limping. The Doctor (allopathic) advised her to take Proxivon for 4-5 days. Since there was no relief, she was advised to take Mobizox - 2 tabs for 3 days which could bring down the pain a bit for short intervals only. Since Dr. Adishesha had come to Bangalore, we consulted him. On examining the tongue, he told that a nerve was twisted and suggested her to chew and eat one Sambar Onion along with a beetle leaf on empty stomach. After first dose, next day she told her pain has comedown by 50%. I suspected Placebo effect. Next day she felt 80% reduction in pain and her limping had totally vanished. She took the onion for 5 days and is totally free from pain.

5. On my suggestion my neighbor Mr. Aswatha Narayana aged 75 yrs, a Diabetic patient on 15 units

of Insulin, strict diet control and partial Kidney problem is under treatment from Dr. Adishesha. After 2 months of treatment, (without Diet control) his sugar came to normal. The Insulin dosage was reduced to 6 units and his treatment for Kidney failure is in progress. Creatinine level has comedown from 2.1% to 1.8% in 3 weeks, but the sugar level went up to 380. On consulting, Dr. Adishesha has asked the patient to continue the medicine and the increase in Sugar level in only momentary. The patient continued the medicine and is happy to note the sugar level has come down to 320, and is confidently continuing the treatment without diet restrictions.

6. My cousin Mr. M. S. Prakash who is undergoing treatment reported that his Knee pain is gone, but is continuing the treatment for other problems.

7. My colleague's sister 60 Yrs age was chronic ulcer patient had undergone surgery, but the ailment had only progressed with internal bleeding and had lost 20 kgs over the yrs. Food was getting discharged in 4-5 Hrs. This lady reported stoppage of bleeding over a fortnight and her ulcer CURED in 60 days.

Based on my experience, I suggest that, my Sankethi brethren may utilize the Services, Dr. Adishesha to get a CURE. Even if we achieve to ENDURE with ease and prevent future complications, our efforts would be rewarded. The consultation fee at Mysore is Rs. 15, at





Vaidyam Hospital Rs. 70, at Ashoka Nursery School Rs. 50.

Dr. Adishesha may be consulted

At Mysore : All Mondays, Tuesday, Thursdays, and Friday.
In his clinic by the side of
Sri Raghavendra Swamiji's Mutt,
Subbarayanakere, Mysore.
Ph : 958212424212

At Bangalore :1. Alternate Saturdays (Starting from 1st May 2004)
At Vaidyam Hospital
851/D, 60th Cross, 5th Block,
Rajajinagar, Bangalore - 560 010.
Ph : 23353525, 23114040

2. Alternate Sundays (Starting from 2nd May 2004)
At Ashoka Nursery School
Ranga Rao Road, Shankara Puram
Bangalore.

**- Sri B. V. Gopalakrishnaiah**
No. 130, 4th Main, 3rd Phase,
J. P. Nagar, Bangalore - 78.
Ph : 26589867

# Shastri and Tuesday

**Lal Bahadur Shastri was born on a Tuesday**



- When he was a small boy, he had fallen in to river while bathing and a farmer had rescued him from sinking and that was Tuesday.
- In 1940 he was arrested during the freedom struggle and that was a Tuesday.
- He became a minister in U.P. on a Tuesday.
- In 1947 he became the Union Minister for Communications and that was a Tuesday.
- In 1951 he became the President of Congress and that was a Tuesday.
- He became the Union Minister for Railways on a Tuesday.
- He became the Home Minister on a Tuesday.
- He became the Prime Minister on a Tuesday.
- The "Bharat Ratna Prashasti" came to him on a Tuesday.
- He signed the Tashkent Agreement on a Tuesday.
- He breathed his last on a Tuesday.

**Courtesy NIE**





# Strange But True

- The cockroach is the fastest animal on six legs covering one meter every second.
- The word "listen" contains the same letters as the word "silent".
- The only two animals that can see behind them selves without turning their heads are the rabbit and the parrot.
- A 'jiffy' is an actual unit of time for 1/100th of a second.
- India invented the Number System.
- The whip makes a cracking sound because its tip moves faster than the speed of sound.
- A hippopotamus can run faster than a man.
- India never invaded any country in the last 10,000 years of her history.
- 'Hippopotomonstrosesquippedaliophobia' is the fear of long words.
- Didaskaleinophobia is the fear of going to school.
- Phobatrivaphobia is a fear of trivia about phobias!!
- It is impossible to lick your elbow.

- A snail can sleep for 3 years.
- The names of the continents all end with the same letter with which they start.
- In 1883, the explosion of the volcano Krakatoa put so much dust into the earth's atmosphere that sunsets appeared green and the moon appeared blue around the world for almost two years.
- "Almost" is the longest word in the English language with all the letters in alphabetical order.
- Twenty four Karat gold is not pure gold since there is a small amount of copper in it. Absolutely pure gold is so soft that it can be moulded with the hands.
- Electricity doesn't move through a wire but through a field around the wire.
- Do you know the names of the three wise monkeys? They are : Mizaru (see no evil). Mikazaru (hear no evil), and Mazaru (say no evil).
- Zero was invented by Aryabhatta.

*Courtesy NIE*

**************





## ಕಾಶೀಯಾತ್ರೆ - ಮತ್ತೂರು ಕೃಷ್ಣಮೂರ್ತಿಗಳೊಂದಿಗೆ

...... ಕಳೆದ ಸಂಚಿಕೆಯಿಂದ

ಭಾರತದ ದಕ್ಷಿಣ ತೀರದ ರಾಮೇಶ್ವರದಿಂದ ಹಿಡಿದು ಉತ್ತರ ಹಿಮಾಲಯ ತಪ್ಪಲಿನ ಕೇದಾರೇಶ್ವರ ಸನ್ನಿಧಿಯವರೆಗೆ, ಗುಜರಾತ್‌ನ ಸೋಮನಾಥದಿಂದ ಹಿಡಿದು ಅಸ್ಸಾಮಿನವರೆಗೆ, ಸಮಗ್ರ ಭರತ ಖಂಡದಲ್ಲಿ ಕೋಟ್ಯಾನು ಕೋಟಿ ಭಕ್ತರು ಈ 12 ಜ್ಯೋತಿರ್ಲಿಂಗಗಳನ್ನು ಮಹಾ ಶಿವರಾತ್ರಿಯ ದಿನ ರಾಷ್ಟ್ರೀಯ ಹಬ್ಬವಾಗಿ ಪೂಜಿಸುತ್ತಾರೆ. ನಾವು ನೀವೂ ಕೂಡ ಈಗ ಕಾಶಿಯ ಜ್ಯೋತಿರ್ಲಿಂಗವನ್ನು ನೋಡದಿದ್ದರೂ ಜ್ಯೋತಿರ್ಲಿಂಗ ಪೂಜಿಸಲ್ಪಡುತ್ತಿದ್ದ ದೇವಾಲಯದ ಒಳಗೆ ಮತ್ತು ಹೊರಗಿನ ಆವರಣವನ್ನು ನೋಡಿ ಸಂತೃಪ್ತರಾಗಿದ್ದೇವೆ. ನಾವು ಯಾತ್ರಾರ್ಥಿಗಳಾಗಿ ಬಂದಿದ್ದೇವೆ. ಸ್ಥಳ ಮಹಾತ್ಮೆ ಕೇಳಿದ್ದೇವೆ; ನಮಗೇಕೆ ಋಷಿ ಮೂಲ, ನದಿ ಮೂಲ ಅಲ್ಲವೇ.

ಈ ಸ್ಥಳದಲ್ಲಿ ಸನ್ಯಾಸಿಗೆ ಭೋಜನ ಪಡಿ ಕೊಡುವ ಕ್ರಮವಿದೆ. ಪ್ರತಿಯೊಬ್ಬರ ಕೈಯಲ್ಲಿ ನೀರು ಬಿಡಿಸಿ 51 ರೂ. ಇಟ್ಟು ಭೋಜನಕ್ಕೆ ಕೊಡುವ ರೂಢಿಯಿದೆ. ಒತ್ತಾಯವಿಲ್ಲ. ನಮ್ಮಲ್ಲಿ ಅನೇಕರು ಭೋಜನಕ್ಕೆ ಕಾಣಿಕೆ ಕೊಟ್ಟರು. ಪಕ್ಕದಲ್ಲಿ ನಂದಿ ಇದೆ, ಎಡಕ್ಕೆ ಬಂದರೆ ದೇವಾಲಯಕ್ಕೆ ತಾಗಿಕೊಂಡು ದೊಡ್ಡ ಮಸೀದಿ ನಿರ್ಮಾಣವಾಗಿದೆ. ನಮ್ಮ ಜೊತೆ ಬಂದ ಪಂಡ ಈ ಮಸೀದಿಯನ್ನು ಔರಂಗಜೇಬ ಕಟ್ಟಿಸಿದ್ದಾನೆ. ಹಿಂದೂಗಳು ಈ ಮಸೀದಿಯನ್ನು ಹಾದುಕೊಂಡೇ ಹೋಗಬೇಕೆಂದು ತಿಳಿಸಿದನು.

ಇಲ್ಲಿಂದ ಮುಂದೆ ನಾವು ನೋಡುವುದು ಧುಂಡಿ ಗಣಪತಿ ದೇವಸ್ಥಾನ. ಎಡಭಾಗಕ್ಕೆ ಹೋದರೆ ವಿಶಾಲಾಕ್ಷಿ ದೇವಸ್ಥಾನ, ನಿಜವಾದ ವಿಶಾಲಾಕ್ಷಿ ಅಮ್ಮನವರ ವಿಗ್ರಹ ಗೋಡೆಗೆ ತಾಗಿಕೊಂಡಿದೆ. ಮುಂಭಾಗಕ್ಕೆ ಬೇರೆ ಮೂರ್ತಿ ಇಟ್ಟಿದ್ದಾರೆ. ಅದಕ್ಕೆ ಚಿನ್ನದ ಮುಖವಾಡ ಹಾಕಿದ್ದಾರೆ. ಇದೇನು ಎರಡು ಮೂರ್ತಿಗಳು ಒಂದರ ಮುಂದೆ ಒಂದು ಇದೆಯಲ್ಲಾ ಎಂದು ಕೇಳಿದ್ದಕ್ಕೆ ಮುಸಲ್ಮಾನರ ಭಯದಿಂದ ಮೂಲ ವಿಗ್ರಹ ಗೋಡೆಯ ಒಳಗೆ ಇಡಲಾಗಿದೆ ಎನ್ನುತ್ತಾರೆ. ಈ ದೇವಾಲಯಗಳಲ್ಲಿ ಒಂದು ವಿಶೇಷತೆ ಏನೆಂದರೆ ನೇರವಾಗಿ ನಾವೇ ದೇವರುಗಳನ್ನು ಪೂಜೆ ಮತ್ತು ಅರ್ಚನೆಗಳನ್ನು ಮಾಡಬಹುದು. ಆದರೆ ದಕ್ಷಿಣದ ದೇವಾಲಯಗಳಲ್ಲಿ ದೂರದಿಂದಲೇ

ಕೈಮುಗಿಯಬೇಕಾಗುತ್ತದೆ. ಊಟದ ಸಮಯವಾದ್ದರಿಂದ ಶಾಪಿಂಗ್ ಮಾಡುವುದನ್ನು ಬೇಗ ಮುಗಿಸಿ, ದೋಣಿಯಲ್ಲಿ ವಾಪಸ್ಸು ಹೊರಟೆವು. ವಿಶ್ರಾಂತಿಯ ನಂತರ ಪ್ರಸನ್ನ ಕುಮಾರ್‌ರವರ ಸೀರೆ ವ್ಯಾಪಾರ ಮಳಿಗೆಗೆ ನಮ್ಮನ್ನು ಕರೆದುಕೊಂಡು ಹೋದರು. ಬಾಲಾನಂದಾಶ್ರಮ 2 ಕಿ.ಮೀ. ಇದ್ದುದರಿಂದ ಸೈಕಲ್ ರಿಕ್ಷಾದಲ್ಲಿ ಹೋಗಬೇಕಾಯಿತು. ಬನಾರಸ್ ಸೀರೆ ಪ್ರಖ್ಯಾತವಾಗಿರುವುದರಿಂದ ಅವರವರ ಅನುಕೂಲಕ್ಕೆ ತಕ್ಕಂಥಾ ಸೀರೆಗಳನ್ನು ತೆಗೆದುಕೊಂಡರು. ಮತ್ತೂರವರು ನಮ್ಮ ಜೊತೆಯಲ್ಲೇ ಇದ್ದು, ಅವರು ಸೀರೆಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಎಲ್ಲರಿಗೂ ಡಿಸ್ಕೌಂಟ್ ಕೊಟ್ಟರು. ಪ್ರಸನ್ನ ಕುಮಾರ್‌ರವರ ರೇಷ್ಮೆ ಅಂಗಡಿ ತುಂಬಾ ಪ್ರಸಿದ್ಧವಾದದ್ದು. ಯಾತ್ರಾರ್ಥಿಗಳೆಲ್ಲಾ ಅಂಗಡಿಗೆ ಹೋದೆವು. ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಪತ್ನಿ ಸಮೇತರಾಗಿ ಯಾತ್ರೆಗೆ ಅಥವಾ ಹೊರದೇಶಗಳಿಗೆ ಪ್ರಯಾಣ ಬೆಳಸಿ ಮನೆಯವರೊಡನೆ, ಸಂಬಂಧಿಕರೊಡನೆ ಮತ್ತು ಸ್ನೇಹಿತರೊಡನೆ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುತ್ತೇವೆ. ಆಗ ಆಯಾ ಸ್ಥಳದಲ್ಲಿರುವ ಪದಾರ್ಥಗಳೆಲ್ಲವನ್ನು ಕೊಂಡುಕೊಳ್ಳಲೇ ಬೇಕೆನ್ನುವ ಆಸೆ. ಕಿಸೆಯಲ್ಲಿ ಹಣ, ನಾವು ತೆಗೆದುಕೊಳ್ಳುವ ಪದಾರ್ಥಗಳಿಗೆ ಎಟಕುತ್ತದೋ ಇಲ್ಲವೋ ಅದು ಬೇರೆ ಮಾತು, ನೆನಪಿನ ಕಾಣಿಕೆಯಾಗಿ ಮನೆಯವರಿಗೆ, ಸ್ನೇಹಿತರಿಗೆ ಕೊಂಡುಕೊಳ್ಳಲೇಬೇಕು. ಹಣವಿಲ್ಲದಿದ್ದರೆ ಸಾಲ ಮಾಡಿಯಾದರೂ ತೆಗೆದುಕೊಳ್ಳಲೇಬೇಕು. ಅಮೇರಿಕಾ ದೇಶಗಳಿಗೆ ಹೋದರಂತೂ ದೇವರೇ ಗತಿ. ಡಾಲರ್‌ನ್ನು ಸಾಲ ಪಡೆಯಬೇಕು. ಬೇಕಾದ್ದನ್ನು ತೆಗೆದುಕೊಂಡು ನಮ್ಮ ಸ್ವಸ್ಥಾನಕ್ಕೆ ಬಂದನಂತರ ರೂಪಾಯಿ ಮೂಲಕ ಹಣವನ್ನು ಹಿಂದಿರುಗಿಸಬೇಕು. ಈ ಅನುಭವ ಹೋದ ಸಂಕೇತಿಗಳಿಗೆ ಇದ್ದೇ ಇರುತ್ತದೆ ಅನ್ನಿ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಮಹಿಳಾ ಓದುಗರನ್ನು ಕೇಳುವುದು ಉಚಿತವಲ್ಲ ಅಲ್ಲವೇ; ನನಗೂ ನನ್ನ ಪತ್ನಿಗೂ ಹೋದಲ್ಲೆಲ್ಲಾ ಮುಖ ಮುನಿಸು. ಏನು ಪ್ರಯೋಜನ ? ಅವಳ ಬೆಂಬಲಕ್ಕೆ ಮತ್ತೂರವರೇ ಬಂದು ಬಿಟ್ಟರು. ಹದಿನಾರು ಸಾವಿರ ರೂಪಾಯಿಯ ಸೀರೆಗಳನ್ನು ತೆಗೆದುಕೊಳ್ಳಬೇಕಾಯಿತು. ಗಂಡಸರು ಯಾರೂ ಮಾತನಾಡುವ ಹಾಗೆ ಇಲ್ಲವಲ್ಲಾ; ನನ್ನ ಲೇಖನವನ್ನು ಸ್ತ್ರೀ ಪುರುಷರಾದಿಯಾಗಿ ಎಲ್ಲರೂ ಓದುತ್ತಿರುವುದರಿಂದ ನಿಮ್ಮ ಅಭಿಪ್ರಾಯವೇನೆಂಬುದನ್ನು ಕೇಳುವುದು ಕಷ್ಟ, ಆಗಲಿ ಮುಂದಕ್ಕೆ ಹೋಗೋಣ.

ಅಲ್ಲಿಂದ ಮುಂದೆ, ಕಾಳಿ ಗಂಗಾಸ್ಥಾಲಿ, ಅನ್ನಪೂರ್ಣೇಶ್ವರಿ, ರುದ್ರಾಕ್ಷಿ, ಸ್ಫಟಿಕ ಮಣಿ, ಗೋಮುಖ, ವಿಭೂತಿ, ಕಾಶಿದಾರ, ವಿಷ್ಣುಪಾದ ಮತ್ತು ಫೋಟೋಗಳನ್ನು ಬದ್ರಿ





ನಾರಾಯಣ್‌ರವರ ಅಂಗಡಿಯಲ್ಲಿ ಎಲ್ಲರೂ ಖರೀದಿಸಿದರು. ಕೆಲವರು ಇಲ್ಲಿಂದಲೇ ಟ್ರಾನ್ಸ್‌ಪೋರ್ಟ್ ಸರ್ವಿಸ್‌ನಲ್ಲಿ ಬುಕ್ ಮಾಡಿದರು. ದೀಪಾರತಿ ವಿಶ್ವನಾಥನಿಗೆ ಇರುವುದು ತಿಳಿಯಿತು. ಜನಸಾಗರದಲ್ಲಿ ಎಲ್ಲರೂ ಕುಳಿತು ಅಥವಾ ನಿಂತು ನೋಡುವುದು ಅಸಾಧ್ಯ ಎಂದು ವೇದ್ಯವಾಯಿತು. ಕಾರಣ ಹೊರ ಪ್ರಾಕಾರದಲ್ಲಿ ಕುಳಿತರೆ ಗರ್ಭಗುಡಿಯ ಒಳಗಡೆ ಏನು ನಡೆಯುತ್ತಿದೆ ಎಂದು ಗೋಚರಿಸುವುದಿಲ್ಲ. ಹಾಗಾಗಿ ದೀಪಾರತಿಯ ಕಾರ್ಯಕ್ರಮವನ್ನು ಕೈಬಿಡಬೇಕಾಯಿತು. ಮುಂದಿನ ಪ್ರಯಾಣಕ್ಕೆ ಸಿದ್ಧವಾಗಬೇಕಾದ್ದರಿಂದ ನಾವು ಇಳಿದುಕೊಂಡ ಸ್ಥಳಕ್ಕೆ ಹೋಗಿ, ವಿಶ್ರಮಿಸಿಕೊಂಡು ಪ್ರಯಾಣಕ್ಕೆ ಸಿದ್ಧರಾದೆವು.

ವಾರಣಾಸಿ ಅಥವಾ ಕಾಶಿ ರಾಷ್ಟ್ರೀಯ ಹೆದ್ದಾರಿ. ಉತ್ತರ ಪ್ರದೇಶದ ದೆಹಲಿ - ಕಲ್ಕತ್ತ ಮಾರ್ಗದಲ್ಲಿದೆ. ಈ ಸ್ಥಳದ ಬಗ್ಗೆ ಮಹಾಭಾರತದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಇಲ್ಲಿ ಬನಾರಸ್ ಹಿಂದೂ ವಿಶ್ವ ವಿದ್ಯಾಲಯಕ್ಕೆ ಭೇಟಿ ಕೊಡಬಹುದು. ಸೆಪ್ಟಂಬರ್‌ನಿಂದ ಮಾರ್ಚ್ ತಿಂಗಳ ಒಳಗೆ ಯಾತ್ರೆ ಮಾಡಬಹುದು. ಈ ದೇವಾಲಯಕ್ಕೆ ಶತಮಾನಗಳ ಇತಿಹಾಸ ಇರುವುದರಿಂದ ಶಿವನಿಗೆ ಅರ್ಪಿತವಾಗಿದೆ. ಈ ದೇವಾಲಯದ ಗೋಪುರ 15.5 ಮೀ. ಎತ್ತರದಲ್ಲಿದೆ. ಈ ಗೋಪುರಕ್ಕೆ ಬಂಗಾರವನ್ನು ಲೇಪ ಮಾಡಿರುವುದರಿಂದ ಇದನ್ನು ಸ್ವರ್ಣ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯಕ್ಕೆ ಮಹಾರಾಜ ರಂಜಿತ್ ಸಿಂಹನು 1 ಟನ್ ಬಂಗಾರವನ್ನು ದಾನ ಮಾಡಿದ್ದರಿಂದ ಈ ಗೋಪುರಕ್ಕೆ ಬಂಗಾರದ ಲೇಪ ಮಾಡಿದ್ದಾರೆ. ಈ ದೇವಾಲಯವನ್ನು ಮುಸಲ್ಮಾನರು ಅನೇಕ ಬಾರಿ ಆಕ್ರಮಣ ಮಾಡಿ ನಾಶ ಮಾಡಿದ್ದರಿಂದ 1776 ರಲ್ಲಿ ಇಂದೋರಿನ ರಾಣಿ ಅಹಲ್ಯಾಬಾಯಿ ಜೀರ್ಣೋದ್ಧಾರ ಮಾಡಿದಳು.

ಇಲ್ಲಿ ದುರ್ಗಾ ದೇವಾಲಯವೂ ಇದೆ. ವಾರಣಾಸಿಯಲ್ಲಿ ಒಂದು ಪ್ರಮುಖ ದೇವಾಲಯವಾಗಿದೆ. ಭಾರತ ಮಾತಾ ದೇವಸ್ಥಾನ ಇದೆ. ರೈಲು ನಿಲ್ದಾಣದಿಂದ 1 ಕಿ.ಮೀ. ದೂರದಲ್ಲಿದೆ. 1936 ರಲ್ಲಿ ನಾಗರೀಕರು ಭಾರತ ಮಾತೆಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಈ ವಿಗ್ರಹವು ಅಮೃತ ಶಿಲೆಯಿಂದ ಕಡೆಯಲ್ಪಟ್ಟಿದೆ. ಮಹಾತ್ಮಗಾಂಧಿ ಉದ್ಘಾಟಿಸಿರುವುದು ಒಂದು ವೈಶಿಷ್ಟ್ಯ. ತುಳಸಿ ಮಾನಸ ದೇವಾಲಯವಿದೆ. ಗೋಸ್ವಾಮಿ ತುಳಸಿದಾಸರು ''ರಾಮಚರಿತ ಮಾನಸ'' ಎಂಬ ಮಹಾಗ್ರಂಥವನ್ನು ರಚಿಸಿದ ಸ್ಥಳದಲ್ಲಿ ಕಟ್ಟಿದ್ದಾರೆ. ಈ ದೇವಾಲಯ ಶ್ರೀರಾಮನಿಗೆ ಅರ್ಪಿವಾಗಿದೆ.

ಕಾಶಿಯನ್ನು ಆಳುತ್ತಿದ್ದ ದೊರೆಗಳು ಒಂದು ಕೋಟೆಯನ್ನು ಕಟ್ಟಿಸಿದ್ದಾರೆ. ಇದಕ್ಕೆ ರಾಮನಗರ ದುರ್ಗ ಎಂದು ಕರೆಯುತ್ತಾರೆ. ಇಲ್ಲಿ ಭಾರತ ಕಲಾ ವಸ್ತು ಸಂಗ್ರಹಾಲಯ ಇದೆ. ಬನಾರಸ್ ಹಿಂದೂ ವಿಶ್ವ ವಿದ್ಯಾಲಯ ಇದೆ. ಈ ವಿಶ್ವ ವಿದ್ಯಾಲಯವನ್ನು ಬಿರ್ಲಾ ಕುಟುಂಬದವರು ಕಟ್ಟಿಸಿದ್ದಾರೆ. ಇಲ್ಲಿ ವಿಶ್ವನಾಥನ ದೊಡ್ಡ ದೇವಾಲಯ ಇದೆ. ಅಲ್ಲದೆ ನೇಪಾಳಿ ದೇವ ಮಂದಿರವೂ ಇದೆ. ಜಂತರ್ ಮಂತರ್‌ನಲ್ಲಿ ಬಾಹ್ಯಾಕಾಶ ನಿರೀಕ್ಷಣಾಲಯವನ್ನು ಕಟ್ಟಿಸಿದ್ದಾರೆ. ಹನುಮಜಯಂತಿ ನಡೆಯುತ್ತದೆ. ಮಹಾಶಿವರಾತ್ರಿಯನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ದ್ರುಪದ ಮೇಳ ನಡೆಯುತ್ತದೆ. ಇಲ್ಲಿನ ಜನಸಂಖ್ಯೆ 14 ಲಕ್ಷ. ನಮಗೆ ಇಳಿದುಕೊಳ್ಳಲು ಸಹಾಯ ಮಾಡುವವರು :-

**ಶ್ರೀ ವಿಶ್ವನಾಥ ಶರ್ಮ,** ಎಂ.ಎ.
ದಿ|| ಮೈಸೂರು ಕೃಷ್ಣಶಾಸ್ತ್ರಿಗಳ ಮಗ
ಕೃಷ್ಣ ರುಕ್ಮಿಣಿ ನಿವಾಸ, 4 : 27,
ಹನುಮಾನ್ ಘಾಟ್,
ವಾರಣಾಸಿ - 221001
ದೂರವಾಣಿ : 0542 - 275291 (ಮನೆ)

ಇವರ ಮಕ್ಕಳು ಶ್ರೀ ಬದರೀನಾಥ ಶರ್ಮ, ಪ್ರಸನ್ನ ಕುಮಾರ್ ಶರ್ಮ,
(ಅನ್ನಪೂರ್ಣ ಬನಾರಸಿ ಸ್ಯಾರಿ ಫ್ಯಾಕ್ಟರಿ ಮಾಲೀಕರು)
35 : 76 ಜಂಗಾಂಭರಿ, ಜಂಗಾಂಮಠ,
ವಾರಣಾಸಿ - 221 001
ದೂರವಾಣಿ : 0542 - 451026

ಬಹುಶಃ ಕಾಶಿಯ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿಸಿದ್ದೇನೆ. ಬನ್ನಿ ಹೋಗೋಣ ಗಯಾ ಕ್ಷೇತ್ರಕ್ಕೆ.

(ಮುಂದುವರಿಯುವುದು.......)

**ಆರ್. ಎಸ್. ಕಾಶೀಪತಿ**
ಕುಶಾಲನಗರ





## ನಿಮ್ಮ ಮಾತು

ಜುಲೈ 2004 ಸಂಚಿಕೆಯ 'ಕಾಶೀಯಾತ್ರೆ' ಶೀರ್ಷಿಕೆಯ ಲೇಖನದ ಬಗ್ಗೆ ನನ್ನ ಪ್ರತಿಕ್ರಿಯೆ. ಶ್ರೀಯುತ ಕಾಶೀಪತಿಗಳು ಜ್ಯೋತಿರ್ಲಿಂಗಗಳ ಬಗ್ಗೆ ಹೇಳುತ್ತಾ, 12 ಜ್ಯೋತಿರ್ಲಿಂಗಗಳ ಹೆಸರು ಮತ್ತು ಸ್ಥಳಗಳನ್ನು ಉಲ್ಲೇಖಿಸಿದ್ದಾರೆ. ಅದರಲ್ಲಿ ನನಗೆ ತಿಳಿದ ಬಗ್ಗೆ, ಗೋಕರ್ಣ ಮಹಾಬಲೇಶ್ವರಲಿಂಗ, ಜ್ಯೋತಿರ್ಲಿಂಗಗಳಲ್ಲಿ ಒಂದಲ್ಲ. ಪ್ರಾಯಶಃ ಶ್ರೀಯುತರು ತಪ್ಪು ಕಲ್ಪನೆಯಿಂದ ಬರೆದಿರಬಹುದು. ರಾವಣನು ಸ್ಥಾಪಿಸಿದನೆಂದ ಮಾತ್ರಕ್ಕೆ ಅದು ಜ್ಯೋತಿರ್ಲಿಂಗವಾಗುವುದಿಲ್ಲ. ಗೋಕರ್ಣದಲ್ಲಿರುವುದು ಶಿವನ ಆತ್ಮಲಿಂಗ. ಶ್ರೀಯುತರು ಈ ಕೆಳಗಿರುವ ಶ್ಲೋಕವನ್ನು ಗಮನಿಸಬೇಕು.

ಸೌರಾಷ್ಟ್ರೇ ಸೋಮನಾಥಂಚ ಶ್ರೀಶೈಲೇ ಮಲ್ಲಿಕಾರ್ಜುನಂ।
ಉಜ್ಜಯಿನ್ಯಾಂ ಮಹಾಕಾಳೇ ಓಂಕಾರ ಮಮಲೇಶ್ವರಂ॥
ಪರಲ್ಯಾಂ ವೈದ್ಯನಾಥಂಚ ಡಾಕಿನ್ಯಾಂ ಭೀಮಶಂಕರಂ।
ಸೇತು ಬಂಧೇತು ರಾಮೇಶಂ ನಾಗೇಶಂ ದಾರುಕಾವನಂ॥
ವಾರಣಾಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀ ತಟೇ।
ಹಿಮಾಲಯೇ ತು ಕೇದಾರಂ ಧುಶ್ಮೇಶಂ ಚ ಶಿವಾಲಯಂ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ।
ಸಪ್ತ ಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥

ಇದರ ಪ್ರಕಾರ ವೈದ್ಯನಾಥ ಜ್ಯೋತಿರ್ಲಿಂಗವು ಪರಭಾನಿಯ ಹತ್ತಿರವಿರುವ ಪರ್ಲಿ ಎಂಬ ಸ್ಥಳದಲ್ಲಿದೆ. ಇದು ಮಹಾರಾಷ್ಟ್ರದಲ್ಲಿದೆ. ಆದ್ದರಿಂದ ಶ್ರೀಯುತರು ತಮ್ಮ ಲೇಖನದಲ್ಲಿರುವ ಗೋಕರ್ಣವನ್ನು ತೆಗೆದು, ಪರ್ಲಿಯ ವೈದ್ಯನಾಥನನ್ನು ಸೇರಿಸಿಕೊಳ್ಳಬೇಕು. ಈ ಪರ್ಲಿಯಲ್ಲಿರುವ ಭೂಮಿಯನ್ನು ಚಿತಾಭೂಮಿ ಎಂದೂ ಕರೆಯುತ್ತಾರೆ. ಇದೂ ಕೂಡ ರಾವಣನಿಗೆ ಸಂಬಂಧಪಟ್ಟದ್ದಾದ್ದರಿಂದ, ಶ್ರೀಯುತರು ಗೋಕರ್ಣವೆಂದು ತಪ್ಪಾಗಿ ಭಾವಿಸಿರಬೇಕು.

**ಹೆಚ್. ಎಸ್. ಪುರುಷೋತ್ತಂ**
ಬೆಂಗಳೂರು

# ಬೆಂಗಳೂರು ಶಾಖೆಯಿಂದ

ಪ್ರಿಯ ಸಂಕೇತಿ ಬಂಧುಗಳೆ,

ಪ್ರತಿ ವರ್ಷದಂತೆ ಈ ವರ್ಷವೂ ಸಿದ್ಧಿ ಬುದ್ಧಿ ಪ್ರದಾಯಕನಾದ ಶ್ರೀ ಮಹಾಗಣಪತಿಯ ಪೂಜಾ ಮತ್ತು ಮಹಾಮಂಗಳಾರತಿಯನ್ನು ದಿನಾಂಕ 03.10.2004ರ ಭಾನುವಾರದಂದು ಆರ್. ವಿ. ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ನಡೆಸಲು ಸಮಿತಿ ತೀರ್ಮಾನಿಸಿರುತ್ತದೆ. ಎಂದಿನಂತೆ ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಮಧ್ಯಾಹ್ನ 4 ಘಂಟೆಯಿಂದ ಹಮ್ಮಿಕೊಂಡಿರುತ್ತೇವೆ. ತಾವೆಲ್ಲರೂ ಸಕುಟುಂಬ ಪರಿವಾರ ಸಮೇತರಾಗಿ ಭಾಗವಹಿಸುತ್ತೀರೆಂದು ಆಶಿಸುತ್ತೇವೆ.

ಮಹಾಗಣಪತಿಯನ್ನು ಪೂಜಿಸಿ, ಬೀಳ್ಕೊಡುವಾಗ ಲಾಲ್‌ಭಾಗ್‌ನಲ್ಲಿ ಕೇವಲ ಬೆರಳೆಣಿಕೆಯಷ್ಟುಮಂದಿ ಮಾತ್ರ ಇರುವುದು ಬಹಳ ಚಿಂತನೀಯವಾದ ವಿಷಯ. ಆದುದರಿಂದಲೇ ಈ ಬಾರಿ ಆದಷ್ಟುಹೆಚ್ಚುಮಂದಿ ಭಾಗವಹಿಸಿ ಶ್ರೀ ಮಹಾಗಣಪತಿಯನ್ನುಮೆರವಣಿಗೆಯಲ್ಲಿತೆಗೆದುಕೊಂಡು ಹೋಗಲು ಆದಷ್ಟು ಹತ್ತಿರವಾಗುವಂತೆ ಈ ಟೀಚರ್ಸ್ ಕಾಲೇಜ್ ಸಭಾಂಗಣವನ್ನು ಗೊತ್ತುಮಾಡಿರುತ್ತೇವೆ. ಆದ್ದರಿಂದ ಸಂಕೇತಿ ಬಂಧುಗಳು ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತೀರಾಗಿ ಆಶಿಸುತ್ತೇವೆ.

ಇತಿ ಕಾರ್ಯಕಾರಿ ಸಮಿತಿ ಪರವಾಗಿ

**ಎಸ್. ಸಿ. ಮಂಜುನಾಥ**
ಅಧ್ಯಕ್ಷರು
(26612979)

ತನು ಮನ ಧನ ಸಹಾಯ ನೀಡಿ ಸಂಘವನ್ನು ಬೆಳೆಸಿ.







# ನೂರೊಂದರ ಹೊಸ್ತಿಲಲ್ಲಿ ನಮ್ಮ ನಗಲಿದ ನಿಟ್ಟೂರು

ಧೀರ್ಘಕಾಲ ಬಾಳುವುದು, ಅದೂ ತುಂಬು ಜೀವನ ನಡೆಸುವುದು ಅಪರೂಪದ ಸಂಗತಿ. ಜೀವನ ಪ್ರೀತಿ, ಸನ್ನಡತೆ, ನಿಯಮಗಳ ಪಾಲನೆ ಮುಂತಾದ ವಿಶೇಷ ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ಸಾರ್ಥಕ ಬದುಕು ಸಾಧ್ಯ. ಅಂತಹ ವಿಶಿಷ್ಟಗುಣಗಳ ಆಗರವೇ ಆಗಿದ್ದವರು ಇತ್ತೀಚೆಗೆ ನಮ್ಮನ್ನು ಅಗಲಿದ ಶ್ರೀಯುತ ನಿಟ್ಟೂರು ಶ್ರೀನಿವಾಸರಾಯರು. ನ್ಯಾಯಾಧೀಶರಾಗಿ, ರಾಜ್ಯದ ರಾಜ್ಯಪಾಲರೂ ಆಗಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ, ಮೌಲ್ಯಗಳ ಹಿತರಕ್ಷಕರಾಗಿ, ಪ್ರೀತಿಯ, ಆತ್ಮೀಯ ಸಂಪನ್ನ ವ್ಯಕ್ತಿಯಾಗಿ ಸಮಾಜದ ಹಲವಾರು ಕ್ಷೇತ್ರಗಳಲ್ಲಿಕ್ರಿಯಾಶೀಲರಾಗಿದ್ದವರು ಶ್ರೀಯುತರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಡಿ.ವಿ.ಜಿ. ಅವರ ನಂತರ ಅಷ್ಟೇ ವ್ಯವಸ್ಥಿತವಾಗಿ ನಡೆಸಿಕೊಂಡು ಬರುವಲ್ಲಿ ಅವರ ಪಾತ್ರ ಹಿರಿದಾದುದು. ನಮ್ಮ ಸಂಘಕ್ಕೆ ಕಾರ್ಯಾಲಯದ ಅವಶ್ಯಕತೆಯಿದ್ದಾಗ ಗೋಖಲೆ ಸಂಸ್ಥೆಯ ಆವರಣದಲ್ಲಿನ ಕೊಠಡಿಯನ್ನುಸಂಘಕ್ಕಾಗಿ ನೀಡಲು ಅಭಿಮಾನದಿಂದ ಶ್ರೀ ಶ್ರೀನಿವಾಸರಾಯರು ಒಪ್ಪಿಗೆ ನೀಡಿದ್ದರು.

ನೂರು ವಸಂತಗಳನ್ನು ಕಂಡ ವಯೋವೃದ್ಧ ನಿಟ್ಟೂರರು, ಓದು, ಮಾತುಕತೆ ಹಾಗೂ ಒಡನಾಟಗಳನ್ನು ಎಂದಿಗೂ ಬಿಟ್ಟವರಲ್ಲ. ಹಿರಿಯ ಗಾಂಧಿವಾದಿ, ಆದರ್ಶ ವ್ಯಕ್ತಿ ಶ್ರೀ ಶ್ರೀನಿವಾಸರಾಯರು ದೈಹಿಕವಾಗಿ ನಮ್ಮೊಡನಿಲ್ಲ. ಆದರೆ ಅವರ ವ್ಯಕ್ತಿತ್ವ ನಮ್ಮೆಲ್ಲರಿಗೂ ಚಿರಂತನ ಸ್ಫೂರ್ತಿ ನೀಡುವಂತಹುದು. ಅಗಲಿದ ಚೇತನಕ್ಕೆ ಸಂಘದ ಅಶ್ರುತರ್ಪಣ.